ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೪, ಸೆಪ್ಟೆಂಬರ್ ೨೦೧೭

ಮನದೊಳು ಕನ್ನಡ ನೆಲಸಿರಲು

ಎಲ್ಲಿಡೆ ಕನ್ನಡ ಕಾಣುವುದು ...

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ವರದಿ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೬

ರಾಂ ರಾಮ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೯

ಕಾವ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಪದಪುಂಜ ... ಪು. ೧೨

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೨೧

ಕಥೆಯಾದವನು – ಭಾಗ ೨

ಪು. ೧೬



ನವರಾತ್ರಿ ಹಬ್ಬದ ಸಮಯದಲ್ಲಿ ಮನೆಮನೆಯಲ್ಲಿ, ಒಪ್ಪ ಓರಣದಿಂದ ಕೂಡಿಸುವ ಆ ಬೊಂಬೆಗಳ ವೈಭವವನ್ನು ನೋಡುತ್ತಾ ಆ ಕಲಾ ಸಿರಿವಂತಿಕೆಯನ್ನು ಮೆಚ್ಚದ ಮನಗಳು ಸಿಗುವುದು ವಿರಳ. ಎಷ್ಟೇ ದೊಡ್ಡವರಾದರೂ, ನಾವು ಆ ಬೊಂಬೆಗಳಿಗೆ ಮನಸೋಲಲೇ ಬೇಕು. ಕೇವಲ ಚಿಕ್ಕವರಾಗಿದ್ದಾಗಷ್ಟೇ ಬೊಂಬೆಗಳು ಸೀಮಿತವಾಗಬೇಕೆಂದಿಲ್ಲ. ದೊಡ್ಡವರಾದ ಮೇಲೂ ಆ ಆಹ್ಲಾದನೀಯ ಅನುಭವವನ್ನು ಮರಳಿ ಪಡೆಯಬಹುದು ಎನ್ನುವುದಕ್ಕೆ ಬೊಂಬೆಹಬ್ಬವು ಒಂದು ಉದಾಹರಣೆ. ನಮ್ಮ ಸಂಸ್ಕೃತಿಯ ಹಿರಿಮೆಯೂ ಕೂಡ.

ಬೊಂಬೆಗಳನ್ನಿಟ್ಟು " ನಮ್ಮ ಮನೆಯ ಬೊಂಬೆ ನೋಡಲು ಬನ್ನಿ" ಎಂದು ಆಹ್ವಾನಿಸಿ, ನಮ್ಮ ಸುತ್ತಮುತ್ತಲಿನವರೊಡನೆ ಬೆರೆಯುವಂತೆ ಮಾಡುವ ಈ ಹಬ್ಬಕ್ಕಿರುವ ಇನ್ನೊಂದು ವಿಶೇಷವೆಂದರೆ "ಬೊಂಬೆ ಬಾಗಿನ". ಒಂಬತ್ತು ದಿನವೂ ಪ್ರಸಾದ / ಚರ್ಪನ್ನು ಪುಟ್ಟ ಪುಟ್ಟದಾಗಿ ಮಾಡಿ, ಬೊಂಬೆ ನೋಡಲು ಬರುವ ಆ ಪುಟಾಣಿಗಳಿಗೆ ಕೊಡುವ ಸಂಭ್ರಮವು ವರ್ಣಿಸಲಸದಳ. ಅದನ್ನು ನೋಡಿರುವವರಿಗೆ, ಅನುಭವಿಸಿರುವವರಿಗೆ ಈ ನೆನಪಿನ ಮೆಲುಕು ಮುಗುಳ್ನಗೆ ತರಿಸುವುದರಲ್ಲಿ ಅನುಮಾನವಿಲ್ಲ.

ಈ ಬೊಂಬೆ ಬಾಗಿನದ ಮಾದರಿಯಲ್ಲೇ ಕನ್ನಡದ ಬಳಕೆಯನ್ನು ಪ್ರೋತ್ಸಾಹಿಸಬಹುದೇನೋ ಎನ್ನುವುದು ಈ ಸಂಚಿಕೆಯ ಸಂಪಾದಕೀಯದ ಆಶಯ. ಕನ್ನಡದಲ್ಲಿ ರಚಿತವಾಗಿರುವ ಒಂದೊಂದು ಕೃತಿಯೂ ವೈವಿಧ್ಯದ ಬೊಂಬೆಯೇ ಸರಿ. ಪ್ರತಿಯೊಬ್ಬರೂ ಹೇಗೆ ಅವರವರ ಮನೆಯಲ್ಲಿ ವಿಭಿನ್ನ ರೀತಿಯಲ್ಲಿ ಬೊಂಬೆಯನ್ನು ಕೂಡಿಸಿ ಆಮಂತ್ರಿಸುತ್ತಾರೋ, ಹಾಗೆಯೇ ಕನ್ನಡದಲ್ಲಿ ಆಸಕ್ತಿ ಇರುವ ನಮ್ಮ ಸ್ನೇಹವರ್ಗದಲ್ಲೇ, ಸಮಯವಾದಗಾಲೆಲ್ಲ ಕನ್ನಡ ಸಾಹಿತ್ಯದ ನವರಾತ್ರಿಯನ್ನು ಮಾಡುತ್ತಲೇ ಇರಬಹುದು. ಕನ್ನಡ ಪುಸ್ತಕಗಳ ಅರ್ಥಾತ್ ಪ್ರದರ್ಶನವೆಂದೇನೂ ಅಲ್ಲ. ಕೆಲವು ಪುಸ್ತಕಗಳ ವಿಚಾರ ವಿನಿಮಯವಾಗಬಹುದು, ಅಥವಾ ಕವಿತಾ ವಾಚನವೋ, ಒಂದು ಸಾಹಿತ್ಯ ಪ್ರಾಕಾರದ ವಿಮರ್ಶೆಯೋ, ಯಾವುದಾದರೂ ಸರಿ, ಒಟ್ಟಿನಲ್ಲಿ ನಮ್ಮನಮ್ಮಲ್ಲಿ ಕನ್ನಡದೇವಿಯ ಆರಾಧನೆಯಾದರೆ ಅದುವೇ ಕನ್ನಡದ ನವರಾತ್ರಿಯಲ್ಲವೇ.

ಹೇಗೆ ಬೊಂಬೆಗಳ ಪ್ರದರ್ಶನಕ್ಕೆ ಚಿಣ್ಣರನ್ನು ಆಕರ್ಷಿಸಲು ಬೊಂಬೆ ಬಾಗಿನ ಒಂದು ನೆಪವೋ, ಹಾಗೆಯೇ ಕನ್ನಡ ಪುಸ್ತಕಗಳ ದರ್ಶನ ಪಡೆಯುವ ನೆಪದಲ್ಲಿ, ಬಾಯ್ಚಪಲಕ್ಕೋಸ್ಕರ ತಿಂಡಿ ತಿನುಸುಗಳ ಬೊಂಬೆಬಾಗಿನವನ್ನು ಕೊಟ್ಟರೆ, ಬಾಯಿಗೂ ರುಚಿ, ಮೆದುಳಿಗೂ ಸಿಹಿಯಲ್ಲವೇ, ಈ ಒಂದು ಆಲೋಚನೆಯನ್ನು ಹಲವರು ಈಗಾಗಲೇ ಸಾಕಾರ ಮಾಡುತ್ತಿರಬಹುದು. ನಾವೂ ನೀವೂ ಕೂಡ ಮಾಡೋಣವಲ್ಲವೆ. ಮನಸ್ಸಿನಲ್ಲಿ ಕನ್ನಡವನ್ನು ಪೋಷಿಸಿದರೆ, ಎಲ್ಲೆಡೆಯೂ ಕನ್ನಡವು ಕಾಣುವುದಲ್ಲವೇ ! ▪

ಎರಡು ತಿಂಗಳ ಪ್ರಮುಖ ದಿನಗಳು

ಸೆಪ್ಟೆಂಬರ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ/ಶರದ್ ಋತು, ಭಾದ್ರಪದ/ಆಶ್ವಯುಜ ಮಾಸ

01 /02 - ಏಕಾದಶಿ
02 ಶ - ಬಕ್ರಿದ್
05 ಮಂ - ಅನಂತನಪದ್ಮನಾಭ ವ್ರತ/ಹುಣ್ಣಿಮೆ
08 ಶು - ಸಂತ ಮೇರಿ ಹಬ್ಬ 09 ಶ - ಸಂಕಷ್ಟ ಚತುರ್ಥಿ
15 ಶು - ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನ
16 ಶ - ಇಂದಿರಾ ಏಕಾದಶಿ 19/20 ಮಹಾಲಯ ಅಮಾವಾಸ್ಯೆ
21 ಗು - ಆಶ್ವಯುಜ ಮಾಸ ಆರಂಭ
27 ಬು - ಸರಸ್ವತಿ ಪೂಜೆ
28 ಗು - ದುರ್ಗಾಷ್ಟಮಿ
29 ಶು - ಮಹಾ ನವಮಿ 30 ಶ - ವಿಜಯ ದಶಮಿ

ಅಕ್ಟೋಬರ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ/ಕಾರ್ತೀಕ ಮಾಸ

01ಭಾ - ಏಕಾದಶಿ
02 ಸೋ - ಗಾಂಧೀಜಿ ಜನ್ಮ ದಿನ
05 ಗು - ಹುಣ್ಣಿಮೆ
08 ಭಾ - ಸಂಕಷ್ಟ ಚತುರ್ಥಿ
15 ಭಾ - ಏಕಾದಶಿ
18 ಬು - ನರಕ ಚತುರ್ದಶಿ
19 ಗು - ದೀಪಾವಳಿ ಅಮಾವಾಸ್ಯೆ
20 ಶು - ಬಲಿಪಾಡ್ಯಮಿ/ ಕಾರ್ತೀಕ ಮಾಸ ಆರಂಭ
31 ಮಂ - ಏಕಾದಶಿ

ಸಿಡ್ನಿ ಗಣೇಶೋತ್ಸವ

ರಂಗನಾಥ ರಾವ್

ಆಸ್ಟ್ರೇಲಿಯಾದ ಫ್ರೆಂಡ್ಸ್ ಆಫ್ ಇಂಡಿಯಾ ಗಣೇಶೋತ್ಸವ ಸಂಭ್ರಮ, ಸಡಗರಗಳ ಭಾವೋದ್ರೇಕವನ್ನು ಅನುಭವಿಸಿಯೇ ತಿಳಿಯಬೇಕು. ಸಂತಸ, ಶಕ್ತಿ ಮತ್ತು ಭರವಸೆಯ ಸಂಕೇತವಾದ ಗಣಪತಿಯ ಉತ್ಸವಕ್ಕೆ, ಸಮುದಾಯವು ಕಡಿಮೆ ಎಂದರೆ ಆರು ತಿಂಗಳ ಹಿಂದಿನಿಂದಲೇ ಪೂರ್ವಸಿದ್ಧತೆಯನ್ನು ಆರಂಭಿಸುತ್ತದೆ. ಚಿಕ್ಕದಾಗಿ ಕುಟುಂಬಗಳ ಮಟ್ಟಿಗೆ ಪ್ರಾರಂಭವಾದ ಈ ಆಚರಣೆಯು, ಈಗ ಇಲ್ಲಿನ ಒಂದು ಗಮನಾರ್ಹ ಉತ್ಸವವಾಗಿದ್ದು, ನಮ್ಮ ಏಕತೆಯ ಸಂಕೇತವಾಗಿದ್ದು ಮತ್ತು ನಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ವೇದಿಕೆಯಾಗಿದ್ದು ಎಲ್ಲ ಆಸಕ್ತರಿಗೆ ಮತ್ತು ಕಾರ್ಯಕರ್ತರಿಗೆ ತಮ್ಮ ಸೃಜನಾತ್ಮಕ ಕಲ್ಪನೆಗಳನ್ನು ಸಾಕಾರಗೊಳಿಸಿ ಸಾದರ ಪಡಿಸುವ ಅಪೂರ್ವ ಅವಕಾಶವಾಗಿದೆ. ಈ ಬಾರಿಯ ಗಣೇಶೋತ್ಸವದಲ್ಲಿ ಅತಿ ಸುಂದರವಾದ ಪೂಜಾ ವೇದಿಕೆ ಮತ್ತು ಮಂಟಪದಲ್ಲಿ, ಕುಶಲಿಕಾರ್ಯಕರ್ತರ ಕಲ್ಪನೆಗಳ ಗರಿಕೆದರಿ ಹಾರುತ್ತಿದ್ದುದು ಗೋಚರವಾಗುತ್ತಿತ್ತು. ಹತ್ತಾರು ಕಾರ್ಯಕರ್ತರು ಅಥವಾ ಕುಶಲಿಗಳು ತಮ್ಮ ಮನಸ್ಸು, ಸಮಯ ಮತ್ತು ಸೃಜನಾತ್ಮಕ ಕ್ರಿಯೆಗಳನ್ನು ಸಾಕಾರಗೊಳಿಸಿ, ಗಣೇಶನೊಬ್ಬನಿಗೇ ಮೀಸಲಾಗಿರುವಂತೆ ಕಣ್ಮನ ತಣಿಸುವ ವೈಭವವನ್ನು ಸೃಷ್ಟಿಸಿದ್ದರು. ಅದಕ್ಕೆ ಒಪ್ಪುವಂತೆ ಕಡೆಯ ದಿನದ ಮೆರವಣಿಗೆಗಾಗಿ ಸಿದ್ಧವಾಗಿದ್ದ ರಥವು ಇನ್ನೊಂದು ಅನುಪಮ ರಚನೆಯಾಗಿತ್ತು.

ಈ ವರ್ಷದ ಉತ್ಸಾಹದ ಆಚರಣೆಯಲ್ಲಿ, ಸುಮಾರು ೫೦೦೦ ಮಂದಿ ಮಂದಿ ಪಾಲ್ಗೊಂಡಿದ್ದಕ್ಕೆ ನಾವು ಸಾಕ್ಷಿಗಳಾದೆವು. ಶುಕ್ರವಾರವು ಉತ್ಸವದ ಮೊದಲನೇ ದಿನವಾಗಿದ್ದು ಅಂದು ಮೋಜಿನ ತಯಾರಿಯ ದಿನ. ಶನಿವಾರದ ಬೆಳಿಗ್ಗೆ ಬಹಳಷ್ಟು ತಂದೆ, ತಾಯಿಯರು ತಮ್ಮ ಮುಂದಿನ ಪೀಳಿಗೆಗಳಾದ ಮಕ್ಕಳುಗಳು ಸ್ವಯಂ ತಾವು ಪೂಜೆ ಮಾಡುತ್ತಿದ್ದುದನ್ನು ಕಣ್ಮನಗಳಲ್ಲಿ ತುಂಬಿಕೊಂಡು ಪುಳಕಿತಗೊಂಡರು. ಪೂಜೆಯು ಸಾಂಪ್ರದಾಯಕವಾಗಿ ನಡೆದಿದ್ದು ಭಾಗವಹಿಸಿದ ಮಕ್ಕಳಿಗೆ ಅಪೂರ್ವ ಅನುಭವವಾಗಿತ್ತು. ನಮ್ಮ ಸಂಪ್ರದಾಯಗಳ ಬಗ್ಗೆ ಅರಿವು ಮೂಡುವಂತೆ ಮಾಡಿದ್ದು ಮಾತ್ರವಲ್ಲದೇ ಅಂತಹ ಆಚರಣೆಗಳ ಹಿಂದಿನ ಅರ್ಥ ಮತ್ತು ಕಾರಣಗಳನ್ನು ಅವರಿಗೆ ತಿಳಿಸಲ್ಪಟ್ಟಿತು. ನಮ್ಮ ಜೀವನ ವಿಧಾನದಲ್ಲಿ ಮಕ್ಕಳಿಗೆ ಇರುವ ನಂಬಿಕೆಯನ್ನು ದೃಢಪಡಿಸಬಹುದೆಂಬ ಆಶಯದಿಂದ ಈ ಬಾರಿಯಷ್ಟೇ ಸೇರ್ಪಡೆಯಾದ ಗಮನಾರ್ಹ ಕ್ರಿಯೆ ಇದು. ಎಲ್ಲರೂ ಆಸಕ್ತಿಯಿಂದ ಭಾಗವಹಿಸಿ ಪೂಜೆಯನ್ನು ಮಾಡುತ್ತಿರುವುದು, ಇನ್ನಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದನ್ನು ಮತ್ತು ಪ್ರೇಕ್ಷಕರಾಗಿರುವುದನ್ನು ಕಂಡಮೇಲೆ, ನಮ್ಮ ಈ ಸಂಪ್ರದಾಯಗಳು ಸ್ಥಿರವಾಗಿರುತ್ತವೆ ಹಾಗೂ ನಮ್ಮದಾಗಿಸಿಕೊಂಡ ಈ ದೇಶದಲ್ಲಿ ನಮ್ಮ ಸಮುದಾಯದ ನೆಲೆಗಟ್ಟಾಗಿ ವರ್ಧಿಸುತ್ತದೆ ಎಂಬುದು ದೃಢವಾಯಿತು.

ಶನಿವಾರ ಸಂಜೆ, ಸಾಂಸ್ಕೃತಿಕ ಸಂಜೆಯಾಗಿದ್ದು ಕಣ್ಣು ಕೋರೈಸುವ ವೈಭವದ ನೃತ್ಯ ಗಾಯನಗಳನ್ನು ಸಿಡ್ನಿಯ ಜನರೆಲ್ಲ ಅನುಭವಿಸಲು ಕಾತರಿಸಿ ಕಾಯುವ ಸಂಜೆ. ಈ ಬಾರಿ ೧೫ಕ್ಕೂ ಹೆಚ್ಚಿನ ನೃತ್ಯ ಹಾಗೂ ಸಂಗೀತದ ಪ್ರಕಾರಗಳು ಪ್ರದರ್ಶಿಸಲ್ಪಟ್ಟವು. ಬಹಳಷ್ಟು ಸಂಘ ಸಂಸ್ಥೆಗಳ ಗಣ್ಯರು, ಸ್ಥಳೀಯ ರಾಜಕಾರಿಣಿಗಳು ಮುಂತಾದ ಮಾನ್ಯರಿಂದ ಕೂಡಿದ ಈ ಕಾರ್ಯಕ್ರಮದಲ್ಲಿ, ನುರಿತ ಕಲಾವಿದರು ಮತ್ತು ಮಕ್ಕಳ ಪ್ರದರ್ಶನವು ಎಲ್ಲರನ್ನೂ ಭಾವೋದ್ರೇಕದ ಉತ್ತುಂಗಕ್ಕೆ ಕರೆದೊಯ್ಯಿತು. ಪ್ರತಿಯೊಂದು ಹೆಜ್ಜೆ, ಪ್ರತಿಯೊಂದು ಚಲನೆಗಳ ಹರಿವನ್ನೂ ಪರಿಪೂರ್ಣಗೊಳಿಸಲು ಆರು ತಿಂಗಳಿಗೂ ಹೆಚ್ಚಿನ ಅವರುಗಳ ಅಭ್ಯಾಸಕ್ಕೆ ಒಡ್ಡಿದ ಪರೀಕ್ಷೆಯಾಗಿದ್ದು, ಅಂದು ವಿಟ್ಲ್ಯಾಮ್ ಸೆಂಟರ್ ನಲ್ಲಿ ಕಾರ್ಯಕ್ರಮದ ಶೋಭೆಯಾಗಿ, ಕಲಾವಿದರನ್ನು ಉತ್ತೇಜಿಸಲು ಸೇರಿದ್ದ ಜನಗಳ ಮಹಾಪೂರದ ಹರ್ಷೋದ್ಗಾರಗಳು ಮುಗಿಲು ಮುಟ್ಟುವಂತಿತ್ತು.
ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಿಂತ ಮಿಗಿಲಾದದ್ದೆಂದರೆ ಮಹಾಪ್ರಸಾದ ವಿತರಣೆಯ ಸೇವೆ. ಅಡಿಗೆಯ ತಯಾರಿ, ವಿತರಣೆ ಮತ್ತು ಶುಚಿಗೊಳಿಸುವುದರ ಯೋಜನೆಗಳು ಮತ್ತು ನಿರ್ವಹಣೆಗಳಿಗೆ ತಿಂಗಳುಗಳ ಹಿಂದಿನ ಮತ್ತು ಕಾರ್ಯಕ್ರಮದ ಮೂರು ದಿನಗಳ ನಂತರದಲ್ಲೂ ಬಹಳಷ್ಟು ಸಮಯದ ಶ್ರಮವಿರುತ್ತದೆ. ಆಹಾರ ವಿತರಣಾ ಸೇವೆಯನ್ನು ಒಂದು ಭಾರತೀಯ ಭವ್ಯ ಮದುವೆಯ ಸಮಾರಂಭದ ಸಂಭ್ರಮಕ್ಕೆ ಹೋಲಿಸಬಹುದು.

ಈ ಬಾರಿ ಭಾರತದಿಂದ ತಂಡ ಹೊಸದಾದಾ ದೊಡ್ಡ ದೊಡ್ಡ ಸ್ಟೀಲ್ ಪಾತ್ರೆಗಳು ಬಡಿಸಲು ಉಪಯೋಗಿಸಿದ್ದು ನೋಡಲು ಅಚ್ಚುಕಟ್ಟಾಗಿ ಕಾಣುತ್ತಿತ್ತು, ನಿಧಾನವಾಗಿ ಪ್ಲಾಸ್ಟಿಕ್ ಬಳಕೆ ಕಡಿಮೆಯಾಗುತ್ತಿದೆ ಎಂದರೆ ಸುಳ್ಳಲ್ಲ. ಆಹಾರದ ಗುಣಮಟ್ಟ, ಸತ್ಕಾರ ಮತ್ತು ಸೇವೆಯು ಅದ್ವಿತೀಯವಾಗಿದ್ದು, ಮೂರು ದಿನಗಳಲ್ಲಿ ಸೇವಾ ಮನೋಭಾವದ ಕಾರ್ಯಕರ್ತರುಗಳು ವಿತರಿಸಿದ ಸುಮಾರು ೬೦೦೦ ಊಟಗಳು ಒಂದು ಅದ್ಭುತ ಸಾಧನೆಯೇ ಸರಿ. ಶನಿವಾರ ರಾತ್ರಿಯೇ ೩೦೦೦ ಕ್ಕೂ ಹೆಚ್ಚಿನ ಜನರಿಗೆ ಒಂದೇ ಘಂಟೆಯೊಳಗೆ ಯಾವ ಸಮಸ್ಯೆಯೂ ಇಲ್ಲದೇ ಮಹಾಪ್ರಸಾದವನ್ನು ವಿತರಿಸಲಾಯಿತೆಂಬುದನ್ನು ಗಮನಿಸಿದಾಗ, ಕಾರ್ಯಕರ್ತರಿಗೆ ಊಟವನ್ನು ಬಡಿಸುವುದೊಂದು ಹಿತಕರವಾದ, ಖುಶಿ ಕೊಡುವ ಅನುಭವವೆನಿಸುತ್ತದೆ.

ನೂರಾರು ಕಾರ್ಯಕರ್ತರನ್ನು ಆಹಾರ ವಿತರಿಸಲು ಕೆಲವೇ ಘಂಟೆಯೊಳಗೆ ಒಟ್ಟುಗೂಡಿಸಿದ್ದು, ನಿರ್ವಹಣಾ ತಂಡವು ಸಾವಿರಾರು ಜನಗಳಿಗೆ ಹಸನ್ಮುಖರಾಗಿ ಯಾವ ಪ್ರಮಾದವೂ ಇಲ್ಲದಂತೆ ಮಹಾಪ್ರಸದವನ್ನು ವಿತರಿಸುವ ಪರಿಪೂರ್ಣವಾದ ಯೋಜನೆಯನ್ನು ರಚಿಸಿ ಕಾರ್ಯರೂಪಕ್ಕೆ ತಂದಿದ್ದರು. ಸ್ವಯಂ ಸೇವೆಯು ಒಂದು ಜವಾಬ್ದಾರಿಯೆನಿಸದೇ ಗೌರವವೆಂದು ಪರಿಗಣಿಸಿ ನಿರ್ವಹಿಸುವ ಕಾರ್ಯಕ್ರಮವಿದು. ಇಲ್ಲಿ ಬೇಕಾದಾಗ ಸೇವೆಗಾಗಿ ಮುಂದೆಬರುವ ಕಾರ್ಯಕರ್ತರ ಮಹಾಪೂರವನ್ನೇ ಕಾಣಬಹುದು. ಇದರಿಂದ ಈ ಕಾರ್ಯಕ್ರಮವು ಉತ್ಸವಕ್ಕಿಂತ ಮಿಗಿಲಾದದ್ದೆನಿಸುತ್ತದೆ. ಇದು ಸಾವಿರಾರು ಮಂದಿಯ ಹೃದಯ ಮತ್ತು ಆತ್ಮಗಳನ್ನು ಬೆಸೆಯುವ ಅವಕಾಶವಾಗಿದೆ.
ಉತ್ಸವದ ಕಡೆಯ ದಿನ ಎಂದರೆ ಭಾನುವಾರವು, ಎಲ್ಲ ಒಳ್ಳೆಯ ವಿಷಯಗಳಿಗೂ ಕೊನೆ ಇರಲೇಬೇಕೆಂಬ ಕಟುಸತ್ಯವನ್ನು ನೆನಪಿಸುತ್ತದೆ. ಈ ಬಾರಿಯ ಯಾವ ಯಾವ ವಿಷಯಗಳನ್ನು ಸರಿಪಡಿಸಿ ಮುಂದುವರೆಯಬಹುದೆಂಬ ಆಲೋಚನೆಗಳು ಜನರಲ್ಲಿ ಮೂಡಿ ಹೊಸ ಹುರುಪು, ಹೊಸ ಉತ್ಸಾಹಗಳಿಂದ ಮುಂದುವರೆಯುವಂತೆ ಮಾಡುವ ದಿನವೂ ಇದಾಗಿದೆ. ಪ್ರತಿವರ್ಷದಂತೆ ಸಾಂಪ್ರದಾಯಿಕವಾಗಿ ಶ್ರೀ ಸತ್ಯನಾರಾಯಣ ಪೂಜೆಯಿಂದ ಆರಂಭವಾದ ಈ ದಿನ, ಕೊನೆಯ ದಿನದಂದು ನಮ್ಮ ವಿಶಿಷ್ಟ ಲಾಂಛನ ಎಂದು ಹೇಳಬಹುದಾದ ಚಿಣ್ಣರ ವಿವಿಧ ವೇಷಭೂಷಣಗಳ ಕಾರ್ಯಕ್ರಮದಿಂದ ಮುಂದುವರೆದು, ನಮ್ಮ ಸಮುದಾಯದ ಸ್ತ್ರೀಯರ ತಂಡದ ವಿಸ್ಫೋಟಕ ನೃತ್ಯ ಕಾರ್ಯಕ್ರಮವಿದ್ದಿತು. ಬಾಲಿವುಡ್ ಬೀಟ್ಸ್ ಗಳನ್ನು ಬಾರಿಸಿ ಮನರಂಜಿಸುತ್ತಿದ್ದ ಸಂಗೀತಕ್ಕೆ ಸರಿಯಾಗಿ ಎಳೆಯರು ವಯಸ್ಕರೆನ್ನದೇ ಎಲ್ಲರೂ ಇಡಿಯ ಸಭಾಂಗಣವನ್ನೇ ನರ್ತನ ವೇದಿಕೆಯನ್ನಾಗಿಸಿ ನರ್ತಿಸಿದರು. ಇದರ ಸಂಭ್ರಮವು ತಾರಕಕ್ಕೇರಿದ ಹಿಂದೆಯೇ ಶಿವಘರ್ಜನೆಯವರ ಡೋಲುಗಳ ಶಬ್ದವು ಭಾವಣಿಯನ್ನು ಹಾರಿಸುವಂತಿದ್ದು ಸಭಾಂಗಣದಲ್ಲಿದ್ದ ಎಲ್ಲರನ್ನೂ ನರ್ತನಕ್ಕೆ ಆಹ್ವಾನವಿತ್ತಿತು. ಇಡಿಯ ವಿಟ್ಸ್ಯಾಂ ಸೆಂಟರ್ ಜೈ ಗಣೇಶ ಮತ್ತು ಗಂಟೆಗಳ ಸದ್ದಿನಿಂದ ತುಂಬಿ ಹೋಗಿ ಸಾಂಸ್ಕೃತಿಕ ಏಕತೆ ಮತ್ತು ಉತ್ಸವಗಳ ದಿವ್ಯ ಪ್ರಭೆ ಮತ್ತು ವಾತಾವರಣವನ್ನು ಸೃಷ್ಟಿಸಿತು. ಗಣೇಶನಿಗೆ ಒಪ್ಪುವಂತೆ ಸಂಭ್ರಮ ಹಾಗೂ ಸಡಗರಗಳಿಂದ, ಸುಂದರ ಮತ್ತು ಕಲಾತ್ಮಕವಾಗಿ ರಚಿಸಿದ ರಥದಲ್ಲಿರಿಸಿ, ಡೋಲು ಮುಂತಾದ ವಾದ್ಯಗಳಿಂದ ಹಾಗೂ ಸಂತೋಷವಾಗಿ ಉತ್ಸವದಲ್ಲಿ ತೊಡಗಿಸಿಕೊಂಡಿದ್ದ ನೂರಾರು ಭಕ್ತಾದಿಗಳಿಂದ ಕೂಡಿ ಮೆರವಣಿಗೆಯಲ್ಲಿ ಕೊಂಡೊಯ್ದು ಚಿಪ್ಪಿಂಗ್ ನಾರ್ಟನ್ ಸರೋವರದಲ್ಲಿ ವಿಸರ್ಜಿಸಲಾಯಿತು.

ಫ್ರೆಂಡ್ಸ್ ಆಫ್ ಇಂಡಿಯ ಸಂಸ್ಥೆಯ ವತಿಯಿಂದ ನಡೆಯುವ ಮೇರು ಉತ್ಸವವಾದ ಗಣೆಶೋತ್ಸವವು ವ್ಯಕ್ತಿ ಕೇಂದ್ರಿತದಿಂದ ಕುಟುಂಬಕ್ಕೆ, ಕುಟುಂಬದಿಂದ ರಸ್ತೆಗೆ, ರಸ್ತೆಯಿಂದ ಸಮುದಾಯಕ್ಕೆ, ಸಮುದಾಯದಿಂದ ಇಂದಿನ ಇಲ್ಲಿನ ನಮ್ಮ ಪರಂಪರೆಯ ಕೇಂದ್ರಿತವಾಗಿ, ಸಂಸ್ಥೆಯಾಗಿ ಮಾತ್ರಲ್ಲದೇ ಸ್ವಯಂ ಸೇವಕರಿಂದಲೇ, ಜೀವನವನ್ನು ಸಂಭ್ರಮಿಸಲು ಶಾಂತಿ ಮತ್ತು ಸಾಮರಸ್ಯ ಸಂದೇಶವನ್ನು ಹರಡುತ್ತಾ ನಮಗೆ ವರವಾಗಿ ಬಂದ ಎಲ್ಲವನ್ನೂ ಆನಂದಿಸುತ್ತಾ, ಬೆಳೆಯುತ್ತಾ ಮುಂದುವರೆದಿದೆ. ಗಣೇಶೋತ್ಸವವನ್ನು ಸಾಧನವಾಗಿಸಿಕೊಂಡು ಎಫ್.ಓ.ಐ. ಸಂಸ್ಥೆಯು ಮನುಕುಲದ ಒಳಿತಿಗಾಗಿ ನಾವೆಲ್ಲ ನಮ್ಮ ಧರ್ಮಾಚರಣೆಗಳನ್ನು ಅರ್ಥೈಸಿಕೊಂಡು ಮತ್ತು ಆಚರಿಸುತ್ತಾ, ವಿಶ್ವ ಭಾತೃತ್ವದ ಪರಿಸರವನ್ನು ಸೃಷ್ಟಿಸುವೆಡೆಗೆ ಪಯಣಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ▪



ಸಿಡ್ನಿಯಲ್ಲಿ ಜರುಗಿದ ಗಣೇಶೋತ್ಸವದ ಛಾಯಾ ಚಿತ್ರಗಳು

ನಾವೇಕೆ ದೀಪವನ್ನು ಬೆಳಗುತ್ತೇವೆ

ಬೇಲೂರು ರಾಮಮೂರ್ತಿ

ಪ್ರತಿಯೊಂದು ಮನೆಯಲ್ಲೂ ದೇವರ ಮುಂದೆ ದೀಪ ಬೆಳಗಿಸುವ ಪದ್ಧತಿ ಇದೆ. ಕೆಲವು ಮನೆಗಳಲ್ಲಿ ಬೆಳಗಿನ ಹೊತ್ತು, ಇನ್ನು ಕೆಲವು ಮನೆಗಳಲ್ಲಿ ಸಂಜೆಯ ಹೊತ್ತು, ಕೆಲವು ಮನೆಗಳಲ್ಲಿ ಎರಡೂ ಹೊತ್ತು ದೇವರ ಮುಂದೆ ದೀಪ ಬೆಳಗಿಸುತ್ತಾರೆ. ಅನೇಕರ ಮನೆಗಳಲ್ಲಿ ದೇವರ ಮುಂದಿನ ದೀಪ ಆರದಂತೆ ನೋಡಿಕೊಳ್ಳುತ್ತಾರೆ. ಇದನ್ನು ಅಖಂಡ ದೀಪ ಎನ್ನುತ್ತಾರೆ. ಎಲ್ಲಾ ಶುಭ ಸಮಾರಂಭಗಳೂ ದೀಪ ಬೆಳಗುವುದರ ಮುಖಾಂತರವೇ ಪ್ರಾರಂಭವಾಗುತ್ತದೆ ಹಾಗೂ ಸಮಾರಂಭ ಮುಗಿಯುವವರೆಗೂ ದೀಪ ಉರಿಯುತ್ತಿರುವಂತೆ ನೋಡಿಕೊಳ್ಳುತ್ತಾರೆ.

ದೀಪ ಎಂದರೆ ಜ್ಞಾನ - ಕತ್ತಲೆ ಎಂದರೆ ಅಜ್ಞಾನ. ಭಗವಂತ ಜ್ಞಾನ ಸಂಕೇತ (ಚೈತನ್ಯ) ಅವನೇ ಮೂಲ. ಅವನಿಂದಲೇ ಜ್ಞಾನ ಮತ್ತು ಅವನಿಂದಲೇ ಬೆಳಕು. ಆದ್ದರಿಂದಲೇ ದೀಪವನ್ನೂ ಭಗವಂತನೆಂದೇ ಪರಿಗಣಿಸಲಾಗುತ್ತದೆ. ಜ್ಞಾನ ದಡ್ಡತನವನ್ನು ಹೋಗಲಾಡಿಸುತ್ತದೆ. ಹೇಗೆಂದರೆ, ಬೆಳಕು ಕತ್ತಲನ್ನು ದೂರ ಮಾಡಿದ ಹಾಗೆ. ಜ್ಞಾನ ಎಂದರೆ ಅದು ಯಾರೂ ಅಪಹರಿಸಲಾರದ ನಮ್ಮ ಆಂತರಿಕ ಸಂಪತ್ತು ಮತ್ತು ಈ ಸಂಪತ್ತಿನಿಂದಲೇ ನಮ್ಮ ಎಲ್ಲಾ ಯಶಸ್ಸೂ ಸಾಧ್ಯವಾಗುವುದು. ಅದಕ್ಕೇ ದೀಪ ಬೆಳಗುವುದರ ಮುಖಾಂತರ ಎಲ್ಲ ಸಂಪತ್ತಿಗಿಂತ ಮುಖ್ಯವಾದ ಜ್ಞಾನಕ್ಕೆ ನಾವು ಶರಣಾಗುತ್ತೇವೆ. ಹಾಗಿದ್ದರೆ ದೀಪ ಬೆಳಗುವುದು ಎಂದರೆ ಒಂದು ಟ್ಯೂಬ್ ಲೈಟನ್ನೋ ಅಥವಾ ಒಂದು ಬಲ್ಬನ್ನೋ ಹತ್ತಿಸಬಹುದಲ್ಲವೇ ಅಂತ ನೀವು ಕೇಳಬಹುದು. ಆದರೆ ಪರಂಪರಾಗತವಾಗಿ ಬಂದಿರುವ ಎಣ್ಣೆ ದೀಪಕ್ಕೆ ಒಂದು ಮಹತ್ವವಿದೆ.

ಏನದು ಮಹತ್ವ ಎಂದರೆ, ದೀಪದಲ್ಲಿರುವ ಎಣ್ಣೆ ಮತ್ತು ಬತ್ತಿ ಇವೆರಡೂ ಒಂದು ವಿಶೇಷ ಗುಣವುಳ್ಳವುಗಳಾಗಿವೆ. ದೀಪದಲ್ಲಿರುವ ಎಣ್ಣೆ ಅಥವಾ ತುಪ್ಪ ನಮ್ಮಲ್ಲಿರುವ ನಕಾರಾತ್ಮಕ ಮನೋಭಾವವನ್ನು ಪ್ರತಿನಿಧಿಸಿದರೆ ಅದರಲ್ಲಿರುವ ಬತ್ತಿ ನಮ್ಮಲ್ಲಿರುವ ಅಹಂ ಅನ್ನು ಪ್ರತಿಪಾದಿಸುತ್ತದೆ. ನಾವು ಜ್ಯೋತಿಯಿಂದ ಬತ್ತಿಯನ್ನು ಹೊತ್ತಿಸಿದಾಗ ನಮ್ಮ ನಕಾರಾತ್ಮಕ ಮನೋಭಾವ ದೀಪ ಉರಿಯುತ್ತಾ ಬಂದಂತೆ ಹೇಗೆ ಎಣ್ಣೆ ಖಾಲಿಯಾಗುತ್ತದೋ ಹಾಗೆ ಖಾಲಿಯಾಗುತ್ತದೆ. ಮತ್ತು ನಮ್ಮ ಅಹಂ ಕೂಡಾ ಬತ್ತಿ ಉರಿದು ಹೋದಂತೆ ಉರಿದುಹೋಗುತ್ತದೆ. ಇನ್ನೊಂದು ವಿಶೇಷ ಎಂದರೆ ದೀಪದಲ್ಲಿರುವ ಜ್ಯೋತಿ ಯಾವಾಗಲೂ ಮೇಲ್ಮುಖವಾಗಿರುತ್ತದೆ. ಅಂದರೆ ನಾವು ಕೂಡಾ ನಮ್ಮ ನಮ್ಮ ಮನೋಭಾವವನ್ನು, ಕಾರ್ಯತತ್ಪರತೆಯನ್ನು, ಉದಾತ್ತ ಮನೋಭಾವವನ್ನು, ಸಮಾಜಮುಖೀ ಕೆಲಸಗಳನ್ನು, ಸತ್ಯಪರತೆಯನ್ನು, ವಿದ್ಯೆ ಸಂಪಾದಿಸುವ ಪ್ರಕ್ರಿಯೆಯನ್ನು ಸದಾ ಎತ್ತರೆತ್ತರಕ್ಕೆ ಕೊಂಡೊಯ್ಯುವಂಥಾ ಜ್ಞಾನವನ್ನೇ ಸಂಪಾದಿಸಬೇಕು. ಅದಕ್ಕೇ ನಾವು ದೀಪ ಬೆಳಗಿದ ತಕ್ಷಣ ಈ ಶ್ಲೋಕವನ್ನು ಪಠಿಸುತ್ತೇವೆ. " ದೀಪಂ ಜ್ಯೋತಿ ಪರಬ್ರಹ್ಮ ದೀಪಂ ಜ್ಯೋತಿ ನಮೋಸ್ತುತೆ ದೀಪೇನ ಹರತೇ ಪಾಪಂ ಸಂಧ್ಯಾ ದೀಪಂ ನಮೋಸ್ತುತೇ" ಅಂದರೆ ಪರಬ್ರಹ್ಮಸ್ವರೂಪಿಯಾದ ದೀಪವೇ ನಿನಗೆ ವಂದನೆ. ದೀಪದಿಂದ ಎಲ್ಲ ಪಾಪಗಳೂ ನಾಶವಾಗುತ್ತವೆ. ಅದರಿಂದಲೇ ಸಂಧ್ಯಾಕಾಲದ ಜ್ಯೋತಿಗೆ ನಮ್ಮ ನಮನ " ಆದ್ದರಿಂದಲೇ ನಾವು ಬೆಳಗಿನ ಮತ್ತು ಸಂಜೆಯ ದೀಪಕ್ಕೆ ನಮನ ಸಲ್ಲಿಸಬೇಕು. ಇದರಿಂದ ನಮ್ಮಲ್ಲಿರುವ ಅಜ್ಞಾನವು ತೊಡೆದು ಹೋಗಿ ನಾವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ. ಬೆಳಗಿನ ಸೂರ್ಯ ಮೂಡುವ ಸಮಯ, ಮತ್ತೆ ಸೂರ್ಯ ಅಸ್ತಂಗತನಾಗುವ ಸಮಯ ಸಂಧ್ಯಾ ಸಮಯ ಎನಿಸಿಕೊಳ್ಳುತ್ತದೆ. ಆಗ ಸಲ್ಲಿಸುವ ನಮನ ಶ್ರೇಷ್ಠವಾದುದು. ಹಾಗಂತ ಬೇರೆ ಸಂದರ್ಭಗಳಲ್ಲಿ ಜ್ಯೋತಿ ಬೆಳಗುವುದು ಅಷ್ಟೊಂದು ಶ್ರೇಷ್ಠ ಅಲ್ಲ ಅಂತಲ್ಲ. ಯಾವ್ಯಾವಾಗ, ಎಲ್ಲೆಲ್ಲಿ ಜ್ಯೋತಿ ಬೆಳಗುತ್ತದೆಯೋ ಆ ಎಲ್ಲಾ ಸಂದರ್ಭಗಳೂ ಶ್ರೇಷ್ಠವೇ. ಏಕೆಂದರೆ ಜ್ಯೋತಿ ಬೆಳಗುತ್ತಿರುವ ಜಾಗದಲ್ಲೆಲ್ಲ ಕತ್ತಲು ಅಂದರೆ ಅಜ್ಞಾನ ಮಾಯವಾಗುತ್ತಿದೆ ಎಂದರ್ಥ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ



ಪುರುಷಸ್ವತಂತ್ರತೆಯ ಪರಮಸಿದ್ಧಿಯದೇನು? |
ಧರಣಿಗನುದಿನದ ರಕ್ತಾಭಿಷೇಚನೆಯೇ? ||
ಕರವಾಲವನು ಪುಷ್ಪಸರವೆಂದು ಸೆಳೆದಾಡೆ |
ಪರಿಮಳವ ಸೂಸುವುದೆ? ಮಂಕುತಿಮ್ಮ ||

ಪುರುಷಸ್ವತಂತ್ರತೆಯ=ಪುರುಷ+ಸ್ವತಂತ್ರತೆಯು, ಪರಮಸಿದ್ಧಿಯದೇನು=ಪರಮಸಿದ್ಧಿಯು+ಅದೇನು, ಧರಣಿಗನುದಿನದ=ಧರಣಿಗೆ+ಅನುದಿನದ, ರಕ್ತಾಭಿಷೇಚನೆಯೇ?=ರಕ್ತ+ಅಭಿಷೇಚನೆಯೇ
ಸಿದ್ಧಿ=ಪ್ರಯೋಜನ, ಧರಣಿ=ಭೂಮಿ, ಅನುದಿನ=ಪ್ರತಿನಿತ್ಯ, ಪುರುಷ=ಶಕ್ತಿ, ಪರಮ=ಸರ್ವೋಚ್ಚ, ಅಭಿಷೇಚನೆ=ಅಭಿಷೇಕ, ಕರವಾಲ=ಕತ್ತಿ, ಸೆಳೆದಾಡೆ=ಎಳೆದಾಡಿದರೆ, ಪರಿಮಳ=ಸುಗಂಧ..

ಆಗ ನಡೆಯುತ್ತಿದ್ದ ಯುದ್ಧ, ಯುದ್ಧದಿಂದ ಆಗುತ್ತಿದ್ದ ದುಷ್ಪರಿಣಾಮಗಳು, ಇವುಗಳ ಬಗ್ಗೆ ಮನಕರಗಿ ಭಾವುಕರಾದ ಮಾನ್ಯ ಗುಂಡಪ್ಪನವರು ಶಕ್ತಿಯ ಸ್ವಾತಂತ್ರದ ಸರ್ವೋಚ್ಚ ಗುರಿ ಏನು ಈ ಭೂಮಿಗೆ ಪ್ರತಿದಿನವೂ ರಕ್ತದ ಅಭಿಷೇಕವೇ? ಒರೆಯಿಂದ ಕತ್ತಿಯನ್ನು ಹೂವಿನ ಮಾಲೆ ಎಂದು ಎಳೆದರೆ ಅದರಿಂದ ಸುಗಂಧ ಬರಬಹುದೇ ಎನ್ನುತ್ತಾರೆ.

ಪುರುಷ ಎಂದರೆ ಗಂಡಸು ಎನ್ನುವ ಅರ್ಥದಲ್ಲಿ ಸಾಮಾನ್ಯ ಬಳಕೆ. ಆದರೆ ವಾಸ್ತವದಲ್ಲಿ ಪುರುಷ ಎಂದರೆ ಶಕ್ತಿ ಎಂದು ಅರ್ಥ "ಪುರೇ ಶೇತಿ ಇತಿ ಪುರುಷಃ". "ಚೇತನ" ಎಂದು ಅಸ್ತಿತ್ವವನ್ನು ಸೂಚಿಸುವಾಗ, ಕ್ರಿಯಾಶೀಲತೆಯನ್ನು ಸೂಚಿಸುವಾಗ, ಚೈತನ್ಯ ಎಂದೂ ಕರೆಯಲಾಗುತ್ತದೆ. ಆದ್ದರಿಂದಲೇ ದೇವರನ್ನು ಸೂಚಿಸುವಾಗ "ಪರಮ" ಅಂದರೆ ಸರ್ವೋಚ್ಚ, ಪುರುಷ ಅಂದರೆ ಶಕ್ತಿ ಎಂಬ ಅರ್ಥದಲ್ಲಿ "ಪರಮ ಪುರುಷ" ಅಥವಾ "ಪರಮಾತ್ಮ" ಎಂದು ಕರೆಯುತ್ತಾರೆ. ಒಟ್ಟಾರೆ, ಪುರುಷವೆಂದರೆ ಶಕ್ತಿ. ಈ ಶಕ್ತಿಯ ಉಪಯೋಗ ರಕ್ಷಣೆಗೆ ಮಾತ್ರ. ಹೇಗೆ ಪರಮಪುರುಷನು ತನ್ನ ಸರ್ವೋಚ್ಚ ಶಕ್ತಿಯನ್ನು ಜಗದ್ರಕ್ಷಣೆಗೆ ವಿನಿಯೋಗಿಸುತ್ತಾನೋ ಹಾಗೆಯೇ, ಈ ಜಗತ್ತಿನಲ್ಲಿ ಹೆಚ್ಚು ಶಕ್ತಿ ಇರುವವರು ತಮಗಿಂತ ಕಡಿಮೆ ಶಕ್ತಿ ಇರುವವರನ್ನು ರಕ್ಷಿಸಬೇಕು ಮತ್ತು ಆ ಶಕ್ತಿಯನ್ನು ಕೇವಲ ಆತ್ಮ ರಕ್ಷಣೆ ಮತ್ತು ಇತರರನ್ನು ರಕ್ಷಿಸುವುದಕ್ಕಾಗಿಯೇ ಉಪಯೋಗಿಸಬೇಕು. ಇದು ಧರ್ಮ. ಇಲ್ಲಿ ಶಕ್ತಿಯೆಂದರೆ ಕೇವಲ, ದೈಹಿಕ ಶಕ್ತಿಯಷ್ಟೇ ಅಲ್ಲ. ಎಲ್ಲ ರೀತಿಯ ಶಕ್ತಿಯೂ ಇದರ ಪರಿಧಿಯೊಳಕ್ಕೆ ಬರುತ್ತದೆ. ದೇಹಬಲ, ಧನಬಲ, ಜನಬಲ, ಅಧಿಕಾರ ಬಲ, ಬುದ್ಧಿ ಬಲ, ಇತ್ಯಾದಿ ಇತ್ಯಾದಿ...ಹೀಗೆ ಯಾವುದೇ ರೀತಿಯ ಶಕ್ತಿಯ ಆಧಿಕ್ಯವಿದ್ದರೂ ಅದನ್ನು ಪರರ ರಕ್ಷಣೆಗೆ ಮಾತ್ರ ಉಪಯೋಗಿಸುವುದು ಧರ್ಮ.

ಆದರೆ ಅಂದಿನ ಮತ್ತು ಇಂದಿನ ವಾಸ್ತವತೆಯೇ ಬೇರೆ. ಹಿಂದಿಯಲ್ಲಿ "ಜಿಸ್ಕಿ ಲಾಠಿ ಉಸ್ಕಿ ಭೈನ್ಸ್" ಎನ್ನುತ್ತಾರೆ. ಅಂದರೆ "ಯಾರ ಕೈಯಲ್ಲಿ ಕೋಲುಂಟೋ ಅವನದೇ ಎಮ್ಮೆ" ಎಂದು. ಯಾರಿಗೆ ಅಧಿಕ ಶಕ್ತಿ ಇದೆಯೋ ಅವನೇ ರಾಜ. ತನಗೆ ಶಕ್ತಿ ಇದೆ. "ನಾನು ಏನನ್ನಾದರೂ ಮಾಡಬಹುದು, ನನ್ನನ್ನು ಕೇಳುವವರಾರು, ಕೇಳಿದವರನ್ನು ಸದೆಬಡಿದುಬಿಡುತ್ತೇನೆ"ಎನ್ನುವ ದುರಾಚಾರದ ಜನರೇ ಅಧಿಕವಾಗಿದ್ದಾರೆ. ಇದು ಅಹಂಕಾರದ ಪರಮಾವಧಿ. ಎಲ್ಲ ಸಂಘರ್ಷಗಳೂ ಈ ಅಹಂಕಾರ ಜನಿತವಾದ ದಬ್ಬಾಳಿಕೆಯಿಂದಲೇ ನಡೆಯುತ್ತವೆ. ಇದು ತಪ್ಪು. ಇದರಿಂದ ಪ್ರತಿನಿತ್ಯದ ರಕ್ತಪಾತ ಸಾವು ನೋವು ಮಾತ್ರ ಎನ್ನುತ್ತಾರೆ ಶ್ರೀ ಗುಂಡಪ್ಪನವರು. ಅದಕ್ಕೊಂದು ಉಪಮೆಯನ್ನು ಕೊಡುತ್ತಾರೆ. ಹೂವಿನಮಾಲೆ ಎಂದು ಒರೆಯಿಂದ ಕತ್ತಿಯನ್ನು ಎಳೆದರೆ, ಅದು ಸುಗಂಧವನ್ನು ಬೀರುತ್ತದೆಯೇ!

ವಾಚಕರೆ, ನಮ್ಮಲ್ಲಿ ಶಕ್ತಿ ಇದ್ದರೆ ಮತ್ತು ಅದು ನಮ್ಮ ಅವಶ್ಯಕತೆಗೆ ಮೀರಿ ಇದ್ದರೆ, ಅದನ್ನು ಪರಹಿತಕ್ಕಾಗಿ ಉಪಯೋಗಿಸಬೇಕು. ಆ ಪರಮಾತ್ಮನ ಕೃಪೆಯಿಂದ ನಮಗೆ ಸಿಕ್ಕ ಅಧಿಕ ಶಕ್ತಿಯನ್ನು ನಮಗಿಂತ ಕಡಿಮೆ ಶಕ್ತಿ ಇರುವವರ ಒಳಿತಿಗಾಗಿ ಉಪಯೋಗಿಸಬೇಕು. ಹಾಗಾದಾಗ ಪರಸ್ಪರ ಪ್ರೀತಿ ವಿಶ್ವಾಸಗಳು ಬೆಳೆದು ಇಡೀ ಸಮಾಜವೇ ವಾಸಿಸಲು ಒಂದು ಸುಂದರ ತಾಣವಾಗುತ್ತದೆ. ಇಂದಿನ ಸ್ವಾರ್ಥಭರಿತ ಸಮಾಜದಲ್ಲಿ ಎಂತೆಂತಹ ವಿದ್ಯಮಾನಗಳು ನಡೆಯುತ್ತಿವೆ ಎಂದು ವಿಷದಪಡಿಸುವ ಅವಶ್ಯಕತೆಯೇ ಇಲ್ಲ. ಅದು ಸರ್ವರಿಗೂ ಗೊತ್ತಿರುವ ವಿಷಯವೇ. ಅದು ತಪ್ಪು. ಅದು ಸರಿಯಿಲ್ಲ ಎಂಬ ಅರಿವೂ ಎಲ್ಲರಿಗೂ ಇದೆ.

ವಾಚಕರೆ, ನಾವೂ ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ನಮ್ಮ ಶಕ್ತಿಯನ್ನು, ಸ್ವರಕ್ಷಣೆಗೆ ಉಪಯೋಗಿಸುವ, ಪರರ ರಕ್ಷಣೆಗೆ ಉಪಯೋಗಿಸುವ. ಆದರೆ ದುರಾಸೆಗೆ, ಸ್ವಾರ್ಥಕ್ಕೆ, ಪರರ ಭಕ್ಷಣೆಗೆ ಉಪಯೋಗಿಸುವ ಬುದ್ಧಿ ನಮಗೆ ಎಂದೂ ಬರದಿರಲಿ ಎಂದು ಪ್ರಾರ್ಥಿಸುತ್ತ, ನಮ್ಮಲ್ಲಿ ಇರಬಹುದಾದ ಕೊರತೆಗಳನ್ನು ನೀಗಿಸಿಕೊಳ್ಳುವ ಪ್ರಯತ್ನವನ್ನು ಮಾಡೋಣ.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಡೈರಿ ರಂಗಣ್ಣನ ಕರಾಮತ್ತು

ಸೀನು ಪರಮ ರೌಡಿ. ಎಲ್ಲ ಪಕ್ಷಗಳಲ್ಲೂ ಬೇಳೆ ಬೇಯಿಸಿಕೊಳ್ಳುವುದರಲ್ಲಿ ನಿಷ್ಣಾತ. ಮೊನ್ನೆ ಅವರ ಮನೆಯ ಮೇಲೆ ರೈಡ್ ಮಾಡಿದೆ. ಡೈರಿ ಸಿಕ್ಕಿತು. ಎಲ್ಲವೂ ಇನಿಷಿಯಲ್‌ಗಳೇ.

"ಆರ್.ಜಿ. ಎಂದು ಬರೆದಿದೆ. ಏನು ಹಾಗೆಂದರೆ?"

"ನಾನು ದೈವಭಕ್ತ. ಆರ್.ಜಿ. ಎಂದರೆ ರಾಗಿಗುಡ್ಡ. ರಾಗಿಗುಡ್ಡದ ಆಂಜನೇಯನೇ ನಮ್ಮ ವಂಶದ ದೇವರು"

"ಇದಕ್ಕೆ ಐದು ಲಕ್ಷದ ಅರವತ್ತು ಸಾವಿರದ ಎಪ್ಪತ್ತೆಂಟು ರೂಪಾಯಿ ಕೊಟ್ಟಿರೇನು?"

"ಉಂಟೇ... ಅದು ರಾಗಿಗುಡ್ಡ ಏರಿಯಾದ ಪಿನ್‌ಕೋಡ್ ದೇವ್ರೂ.... 560078"

"ಎಸ್‌ಜಿ ಎಂದರೆ ಸೋನಿಯಾ ಗಾಂಧಿಯಲ್ಲವೇನು? 112,30,97,789 ಎಂದು ಬರೆದಿರುವುದು ಸಂಖ್ಯೆಯೇ. ನೀವು ಸೋನಿಯಾಜೀಗೆ ನೂರಹನ್ನೆರಡು ಕೋಟಿ ಹಣ ನೀಡಿದ್ದೀರೆಂದು ಆರೋಪಿಸುತ್ತೇನೆ"

"ಆರೋಪಿಸಿ. ನಮ್ಮಲ್ಲಿ ವಾಕ್ ಸ್ವಾತಂತ್ರ್ಯ ವಿರುವುದರಿಂದ ವ್ಯಕ್ತಿಗಳಾಗಲಿ, ವಾಹಿನಿಗಳಾಗಲಿ ಆರೋಪಿಸಬಹುದು. ಪ್ರೂವ್ ಆಗ್ಬೇಕು ಸ್ವಾಮಿ. ಅಲ್ಲೀವರ್ಗೂ ಎದುರಿಗೇ ಕೊಲೆ ಮಾಡಿದರೂ ಶಿಕ್ಷೆ ಇಲ್ಲ ಅನ್ನೋದು ನೆನಪಿರಲಿ. ಎಸ್.ಜಿ. ಎಂದರೆ ಸ್ಟಡಿ ಗ್ರೂಪ್ ಅಂತ. ನಮ್ಮದೇ ಒಂದು ಸ್ಟಡಿ ಸರ್ಕಲ್ ಇದೆ. ಅದರ ದೆಹಲಿಯ ಫೋನ್ ನಂಬರ್ ಅದು. ಡಯಲ್ ಮಾಡಿ ನೋಡಿ"

"ಸುಳ್ಳು. ಆರ್ವಿಡಿ ಎಂದರೆ ಆರ್.ವಿ. ದೇಶಪಾಂಡೆಯಲ್ಲವೆ? ಇದರ ಮುಂದಿರುವ ಹತ್ತು ಸಂಖ್ಯೆ ಅವರಿಗೆ ನೀಡಿದ ಹಣವಲ್ಲವೆ?"

"ದಾಖಲೆ ಇಲ್ಲದೆ ಆರೋಪ ಸಲ್ಲದು. ಆರ್ವಿಡಿ ಎಂದರೆ ರಾಮ್ ವಿಚಾರ್ ದಲ್ ಎಂಬ ಸಂಸ್ಥೆ. ನಮ್ಮ ಪಾಡಿಗೆ ರಾಮ, ಕೃಷ್ಣ ಎಂದಿರುವುದಕ್ಕೆಂದು ಇರುವ ಸಂಸ್ಥೆ. ಅದರ ನಂಬರ್ ಅದು"

"ಇದಂತೂ ತಪ್ಪಿಸಿಕೊಳ್ಳಲಾರಿರಿ. ಎನ್.ಎಮ್. ಎಂದು ಬರೆದು ಆರು ಕೋಟಿ ಎಂದು ಅಕ್ಷರದಲ್ಲಿ ಬರೆದಿದ್ದೀರಿ. ಇದು ನರೇಂದ್ರ ಮೋದಿಯವರಿಗೇ ನೋಟು ನಿಷೇಧ ಮಾಡಬೇಡಿ ಎಂದು ಕೋರಿ ಕಳುಹಿಸಿದ ಹಣವೆಂದು ಆರೋಪಿಸುತ್ತೇನೆ. ಇದಕ್ಕೇನು ಹೇಳುವಿರಿ?"

"ಮೋದಿಯ ಹೆಸರಿಗೆ ಕಳಂಕ ತರುತ್ತಿರುವಿರಿ ಎನ್ನುತ್ತೇನೆ. ಎನ್.ಎಮ್. ಎಂದರೆ ನರೇಂದ್ರ ಮೋದಿಜೀ ಅಲ್ಲ; ನಾರಾಯಣ ಮಂತ್ರ. ರಾಮಕೋಟಿ ಬರೆಯುವಂತೆಯೇ ಆರು ಕೋಟಿ ಸಲ ನಾರಾಯಣ ಎಂದು ಬರೆದಿದ್ದೇನೆ"

"ಸಾಕ್ಷಿ ತೋರಿಸಿ. ಬರೆದ ಪುಸ್ತಕಗಳು ಎಲ್ಲಿ?"

"ಒಂದೊಂದು ಪುಸ್ತಕವನ್ನು ಒಂದೊಂದು ದೇವಸ್ಥಾನದ ಮುಂದಿನ ಕಟ್ಟೆಯ ಮೇಲೆ ಇಟ್ಟು ನಾರಾಯಣಾಯ ಸ್ವಾಹಾ। ನಾರಾಯಣಾಯ ಇದಂ ನ ಮಮ। ಎಂದು ಹೇಳಿ ಬಂದೆ"

"ಯಾವುದಾದರೂ ದೇವಸ್ಥಾನದಿಂದ ಪುರಾವೆಯಾಗಿ ಪುಸ್ತಕ ಒದಗಿಸುವಿರಾ?"

"ಆಗದು. ನಾನು ಅತ್ತ ಇಟ್ಟು, ಇತ್ತ ತಿರುಗಿದಂತೆ ಗೋಮಾತೆಯು ಅದನ್ನು ಪ್ರಸಾದವಾಗಿ ಸ್ವೀಕರಿಸಿದಳು"

"ಎಲ್ಲಾ ದೇಗುಲಗಳಲ್ಲೂ ಹಾಗೆಯೇ ಆಯಿತು ಎಂದರೆ ನಂಬುವಷ್ಟು ದಡ್ಡರೇನು ನಾವು?"

"ರಾಜ್ಯದಲ್ಲಿ ಬರ ಸ್ವಾಮಿ. ಹುಲ್ಲಿಗಿಂತ ಹುಲುಸಾಗಿ ಸಿಗುವುದು ಇಂತಹ ಸಾಹಿತ್ಯವೇ ಎಂದು ನಿಮಗೆ ತಿಳಿದಿಲ್ಲದಿರಬಹುದು. ಆದರೆ ಗೋವುಗಳಿಗೆ ತಿಳಿದಿದ್ದಂತಿದೆ."

"ಸರಿ. ಇಲ್ಲಿ ಡಿ.ಜಿ. ಎಂದಿದ್ದು ಅದರ ಮುಂದೆ ಎಂಟು ಅಂಕಿಗಳಿವೆ. ಇದಂತೂ ಪಾರ್ಟಿ ಫಂಡೇ ಇರಬೇಕು" ನನ್ನದು ಹೇಗಾದರೂ ಅವನನ್ನು ಸಿಕ್ಕಿಸುವ ಹಠ. ಅವನು ನುಣುಚಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್.

"ದೊಡ್ಡವರ ಬಗ್ಗೆ ಸಣ್ಣ ಮಾತು ಆಡಬೇಡಿ. ಅದು ಡಿ.ಜಿ. ಆಸ್ಪತ್ರೆಯ ನಂಬರ್. ಡಯಲ್ ಮಾಡಿ ನೋಡಿ"

ಡಯಲ್ ಮಾಡಿದೆ. "ಫೋನ್ ಡೆಡ್ ಆಗಿದೆ" ಎಂದೆ.

"ಆಸ್ಪತ್ರೆ ಎಂದಮೇಲೆ ಡೆತ್ ಅನಿವಾರ್ಯ ಬಿಡಿ. ಡೆಡ್ ಆಗಿರಬಹುದು".

ಸೀನುವಿನ ಒಂದು ಸಣ್ಣ ಪರಿಚಯ ಮಾಡಿಕೊಡುತ್ತೇನೆ. ಆಗ ನಾನಿನ್ನೂ ಸರ್ಕಾರಿ ನೌಕರಿಗೆ ಸೇರಿರದ ಕಾಲ. ಸೀನುವಿನ ಮೂರು ವರ್ಷದ ಮೊಮ್ಮಗನ ಹುಟ್ಟುಹಬ್ಬದ ಸಂದರ್ಭ. ಮೊಮ್ಮಗನಿಗೆ ಶುಭ ಹಾರೈಸಲು ದೊಡ್ಡ ಗುಂಪು. ಎಲ್ಲರ ಕೈಯಲ್ಲೂ ಹತ್ತರಿಂದ ಇಪ್ಪತ್ತು ಸಾವಿರ ನಗದು ಹಣ. ಮೊಮ್ಮಗನಿಗೆ ಹಣದ ಮಳೆಯೇ ಮಳೆ.

"ಇಷ್ಟು ಹಣ ಗಳಿಸಲು ನಿಮ್ಮ ಮೊಮ್ಮಗ ಮಾಡಿದ ಸಾಧನೆಯಾದರೂ ಏನು? ನಿಮ್ಮ ಮನೆಯ ಆಳುಗಳೂ ಅದು ಹೇಗೆ ಹತ್ತಾರು ಸಾವಿರಗಳನ್ನು ಕೊಡಲು ಸಾಧ್ಯ?" ಎಂದು ಕೇಳಿದೆ.

"ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ..." ಎಂದರು ಸೀನು.

ಮುಂದಿನ ಪುಟ ನೋಡಿ ...

“ಅಂದ್ರೆ?”

“ತಿಜೋರಿಯೊಳಗೆ ಇದ್ದ ನೋಟುಗಳು ಗಾಳಿ ಆಡಲಿ ಅಂತ ಆಚೆ ತಂದೆ. ನಾನೇ ನಮ್ಮ ಆಳುಗಳ ಕೈಗೆ ದುಡ್ಡು ಕೊಟ್ಟು ಕ್ಯಾಮರಾ ಮುಂದೆ ತಂದ್ಕೊಡಿ ಅಂದೆ”

“ಅವರ ಮೇಲೆ ಎಂತಹ ಕರುಣೆ! ಮಗುವಿಗೆ ಮುಯ್ಯಿ ಮಾಡಲು ಆಗಲಿಲ್ಲವಲ್ಲಾ ಎಂದು ಬೇಜಾರು ಮಾಡಿಕೊಳ್ಳದಿರಲೀಂತ ಈ ಉಪಾಯ ಅಲ್ವಾ?” ಎಂದೆ.

“ಎಳಸು ಕಣಯ್ಯ ನೀನು. ಈಗ ಕ್ಯಾಮೆರಾ ಮುಂದೆ ಬಂದದ್ದನ್ನೆಲ್ಲ ಅಕೌಂಟ್ ಇಡ್ತೀನಿ. ಇದೆಲ್ಲ ವೈಟ್ ಆಯ್ತು. ಬ್ಲ್ಯಾಕ್‌ನ ವೈಟ್ ಮಾಡಕ್ಕೆ ಬರ್ತ್‌ಡೇ ಬೆಷ್ಟು ಕಣಯ್ಯ” ಎಂದಿದ್ದರವರು.

ಸರ್ಕಾರಿ ನೌಕರಿಗೆ ಸೇರಿದ ನಂತರ ಸೀನುರವರ ಮೇಲೆ ನಾನು ಕೈಗೊಂಡ ಎರಡನೆಯ ರೈಡ್ ಇದು. ಮೊದಲನೆಯ ರೈಡ್‌ನಲ್ಲಿ ಆಶ್ರಮವೊಂದು ಅವರನ್ನು ಬಚಾವ್ ಮಾಡಿತು. ಅಂದು ಸೀನುರವರ ಮನೆಯಲ್ಲಿ ಮೂರು ಲಕ್ಷ ನಗದು ಹಣ ದೊರಕಿತ್ತು.

“ಯಾರ ಹಣ ಇದು?”

“ನನ್ನದಲ್ಲ”

“ಹಾಗಿದ್ದರೆ ಇಲ್ಲೇಕೆ ಬಂತು?”

“ಲಕ್ಷ್ಮಿ ಚಂಚಲೆ ಸ್ವಾಮಿ. ಬರುತ್ತಾಳೆ, ಹೋಗುತ್ತಾಳೆ”

“ಬಂದು ಹೋಗುವ ನಡುವೆ ಈ ಬಾರಿ ನೀವು ಕಂಬಿ ಎಣಿಸಬೇಕಾಗುತ್ತದೆ” ಧಮಕಿ ಹಾಕಿದೆ.

“ಇದು ಭಕ್ತರ ಹಣ. ಪುಣೆಯ ತಿಪ್ಪೇಶ್ವರ ಆಶ್ರಮಕ್ಕೆ ಕೊಡಿರಿ ಎಂದು ತಿಪ್ಪೇಶ ಭಕ್ತರು ನನಗೆ ನೀಡಿದ್ದಾರೆ”

“ನಿಮಗೇಕೆ ನೀಡಿದರು? ಮನಿ ಆರ್ಡರ್ ಮಾಡಬಹುದಿತ್ತು. ಬ್ಯಾಂಕ್ ಟ್ರಾನ್ಸ್‌ಫರ್ ಮಾಡಬಹುದಿತ್ತು”

“ನೀವೇ ಕರೆಸಿ ಕೇಳಿ ಸ್ವಾಮಿ”

ಕರೆಸಿದೆ. ಪುಂಡ ಬಂದ.

“ಪುಣೆಯ ತಿಪ್ಪೇಶನ ಆಶ್ರಮಕ್ಕೇ ಏಕೆ? ಇದೇ ಊರಿನಲ್ಲಿ ಇರುವ ತಿಪ್ಪೇಶನ ಆಶ್ರಮಕ್ಕೆ ಕೊಡಬಹುದಲ್ಲ?”

“ಮಾರ್ಕೆಟ್‌ನಾಗೂ ತಿರ್ಪತಿ ತಿಮ್ಮಪ್ಪ ಅವ್ನೆ ನನ್ನೊಡೆಯ. ಆದ್ರೂ ತಿರ್ಪತಿ ಎಡುಕೊಂಡಲವಾಡನಿಗೇ ಹೆಚ್ಚು ಜನ ನಡ್ಕೋತಾರೆ. ಹಾಗೇಯ ಇದೂನೂ. ಪುಣೆ ಆಶ್ರಮಕ್ಕೆ ದುಡ್ಡು ಕೊಡೋದು ನನ್ನಿಷ್ಟ. ಇದನ್ನು ಧಾರ್ಮಿಕ ಸ್ವಾತಂತ್ರ್ಯ ಅಂತ ಕರೀತಾರೆ. ಆವಯ್ಯ ಏನಾದ್ರೂ ಕೇಳಿದ್ರೆ ಹೀಗೆ ಹೇಳು ಅಂತ ಅಡ್ವೊಕೇಟ್ ಅನ್ಯಾನಯ್ಯನವರು ಹೇಳಿಕೊಟ್ಟಿದ್ದಾರೆ. ತೆಪ್ಪಾ?” ಎಂದ ಪುಂಡ.

“ಅಲ್ಲಿಗೆ ಕಳುಹಿಸುವುದರ ಬದಲು ಸೀನುವಿನ ಕೈಗೇಕೆ ಕೊಟ್ಟಿದ್ದು?”

“ಇವರು ನಮ್ಜಾತಿಯವರು. ಬ್ಯಾರೆ ಜಾತಿಯವರ ಕೈಯಿಂದ ಹುಂಡಿಗೆ ತಲುಪೋ ಬದಲು ನಮ್ಜಾತಿ ಕೈಯಿಂದ ಹುಂಡಿಗೆ ಹೋದ್ರೆ ನಮ್ಜಾತಿಗೆ ಒಳ್ಳೇದಾಯ್ತದೆ ಅಂತ ನನ್ನ ನೆಂಬ್ಕೆ” ಎಂದನವ.

ಅಂತೂ ಇಂತೂ ಆ ಬಾರಿ ಮೂರು ಲಕ್ಷ ನಗದನ್ನು ಆಶ್ರಮಕ್ಕೆ ನೀಡಿ, ಸೀನು ಬಚಾವಾಗಿದ್ದರು. ಈ ಬಾರಿ?

“ಡೈರಿಯಲ್ಲಿನ ಹಸ್ತಾಕ್ಷರ ನಿಮ್ಮದೇ. ನಿಮ್ಮನ್ನು ಜೈಲಿಗೆ ಅಟ್ಟದೆ ಬಿಡುವುದಿಲ್ಲ” ಎಂದೆ.

“ಸರಿ. ನೀವು ನಿಮ್ಮ ಆಫೀಸ್ ವಿಳಾಸ ಇಲ್ಲಿ ಬರೆಯಿರಿ. ಒಂದು ಕರಾಮತ್ತು ತೋರಿಸುತ್ತೇನೆ” ಎಂದರು ಸೀನು. ಬರೆದೆ.

“ಡೈರಿ ರಂಗಣ್ಣ, ಬಾ ಒಳಗೆ” ಎಂದರು. ಒಳಬಂದ ರಂಗಣ್ಣನಿಗೆ ನನ್ನ ಚೀಟಿಯಿತ್ತು “ಬರಿ” ಎಂದರು.

ರಂಗಣ್ಣ ಮೂರು ಪ್ಯಾರಾಗ್ರಾಫ್ ಬರೆದ. ಒಂದು ಥೇಟ್ ಸೀನುರವರ ಅಕ್ಷರ; ಇನ್ನೊಂದು ಥೇಟ್ ನನ್ನ ಅಕ್ಷರ; ಮತ್ತೊಂದು ತನ್ನದೇ ಅಕ್ಷರ.

“ಈಗ ಹೇಳಿ. ಆ ಡೈರಿಯನ್ನು ರಂಗಣ್ಣ ಬರೆದನೋ, ನಾನೋ?” ಮೀಸೆಯಲ್ಲೇ ನಕ್ಕರು ಸೀನು.

ನಾನು ಮತ್ತೊಮ್ಮೆ ಸೋಲೊಪ್ಪಿದೆ. ▪

ರಾಜ್ಯಲಕ್ಷ್ಮಿ

ಕನಕಾಪುರ ನಾರಾಯಣ

ವೀರವರ ಒಬ್ಬ ಶಕ್ತಿಶಾಲಿ ಯುವಕ, ಅವನು ಶಿವವರ್ಮಾ ಎಂಬ ರಾಜನ ಬಳಿಗೆ ಹೋಗಿ ತಾನು ರಾಜನಿಗೆ ಸೇವಕನಾಗುವ ಆಸೆ ಹೇಳಿಕೊಂಡ. ರಾಜನು ಅವನ ಮೈಕಟ್ಟು ಚುರುಕುತನ ನೋಡಿ ಕೆಲವು ಪರೀಕ್ಷೆ ಕೊಟ್ಟ, ಎಲ್ಲ ಪರೀಕ್ಷೆಯಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದ ವೀರವರನಿಗೆ ರಾಜನ ಆಪ್ತ ರಕ್ಷಕನಾಗುವ ಕೆಲಸ ಸಿಕ್ಕಿತು. ಒಮ್ಮೆ ರಾತ್ರಿಯವೇಳೆ ರಾಜನು ಮಲಗಿರಲು ಹೊರಗೆ ಉದ್ಯಾನವನದಲ್ಲಿ ಓರ್ವ ಹೆಣ್ಣಿನ ಅಳುವ ಧ್ವನಿ ಕೇಳಿಸಿತು. ರಾಜನಿಗೂ ಎಚ್ಚರವಾಯಿತು ವೀರವರನನ್ನು ಕಳುಹಿಸಿ ವಿಚಾರಿಸಲು ಹೇಳಿದ. ಧ್ವನಿ ಕೇಳುವ ಬಳಿಗೆ ಅವನು ಬಂದು ವಿಚಾರಿಸಲು ಆಕೆ ಆ ರಾಜ್ಯದ ರಾಜ್ಯಲಕ್ಷ್ಮಿಯೂ, ಆಕೆಗೆ ರಾಜನ ಪ್ರಾಣಕ್ಕೆ ಗಂಡಾಂತರ ಬಂದಿರುವುದಾಗಿಯೂ, ಅದಕ್ಕೆ ಪರಿಹಾರವಾಗಿ ದೂರದ ಅಗ್ನಿದೇವನಿಗೆ ಬಲಿ ಬೇಕಿರುವುದಾಗಿಯೂ ತಿಳಿಸಿದಳು.

ಕೂಡಲೇ ವೀರವರ ತನ್ನ ಸ್ವಾಮಿಯನ್ನು ಉಳಿಸುವ ನಿಷ್ಠೆಯಲ್ಲಿ ಹಿಂದು ಮುಂದು ನೋಡದೆ ಆಕೆ ಹೇಳಿದ ಸ್ಥಳಕ್ಕೆ ಹೋಗಿ ಅಗ್ನಿದೇವನ ಬಾಯಿಯೊಳಗೆ ಪ್ರವೇಶಿಸಿ ಜೀವ ತ್ಯಾಗ ಮಾಡಿದನು. ಬಹಳ ಸಮಯ ವೀರವರನು ಹಿಂತಿರುಗದ ಕಾರಣ ರಾಜನೂ ಹೊರಬಂದು ಉದ್ಯಾನವನದಲ್ಲಿದ್ದ ಹೆಣ್ಣನ್ನು ವಿಚಾರಲು, ವಿಷಯ ತಿಳಿದು ವಿಷಾದದಿಂದ ಅಗ್ನಿದೇವನ ಗುಹೆಯ ಬಳಿಗೆ ಬರುವಷ್ಟರಲ್ಲಿ ವೀರವರನ ಅಗ್ನಿಪ್ರವೇಶ ಆಗೇ ಹೋಗಿತ್ತು.ನಿಷ್ಠಾವಂತನನ್ನು ಕಳೆದುಕೊಂಡ ಬೇಸರದಿಂದ ರಾಜನೂ ಸಹ ಆತುರದಿಂದ ಅಗ್ನಿಪ್ರವೇಶ ಮಾಡಿ ತನ್ನ ಜೀವವನ್ನೂ ತ್ಯಾಗ ಮಾಡಿಬಿಟ್ಟನು... ..... ಎಂದು ಹೇಳಿ ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೇತಾಳದ ಪ್ರಶ್ನೆ ಹೀಗಿತ್ತು: ಇಬ್ಬರಲ್ಲಿ ಯಾರ ತ್ಯಾಗ ದೊಡ್ಡದು? ಯಾರು ದುಡುಕಿ ಪ್ರಾಣ ತ್ಯಾಗ ಮಾಡಿದರು?
ಅದಕ್ಕೆ ವಿಕ್ರಮನ ಉತ್ತರ: "ವೀರವರನ ತ್ಯಾಗ ತನ್ನ ಸ್ವಾಮಿಯನ್ನು ಉಳಿಸಲು ಮಾಡಿದ ಕರ್ತವ್ಯನಿಷ್ಠೆ, ಆದರೆ ರಾಜನು ತನ್ನ ಪ್ರಜೆಗಳನ್ನು ಮರೆತು ಅಗ್ನಿಪ್ರವೇಶ ಮಾಡಿದ್ದು ಅನಗತ್ಯ " ಎಂದಿತ್ತು.
ಉತ್ತರ ಮೆಚ್ಚಿದ ಬೇತಾಳ "ಅಂತ್ಯದಲ್ಲಿ ಅಗ್ನಿಯು ಯಾರನ್ನೂ ಸುಡದೇ ಜೀವದಾನ ಮಾಡಿತು,ಅದೆಲ್ಲಾ ರಾಜ್ಯಲಕ್ಷ್ಮಿಯ ಪರೀಕ್ಷೆ, ವಿಕ್ರಮಾದಿತ್ಯನೇ ನೀನು ಸರಿಯಾದ ಉತ್ತರ ಕೊಟ್ಟಿರುವೆ" ಎಂದುಹೇಳಿ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪

ಹಾಲುಬಾಯಿ

ಬೇಕಾಗುವ ಸಾಮಗ್ರಿಗಳು

- ಅರ್ಧ ಕಿಲೋ ಅಕ್ಕಿ
- ಒಂದು ತೆಂಗಿನ ಕಾಯಿ ಅಥವಾ ಗಟ್ಟಿಯಾದ ಕೋಕನಟ್ ಕ್ರೀಮ್
- ಒಂದು ಕಿಲೋ ಬೆಲ್ಲ
- ಚಿಟಿಕೆ ಉಪ್ಪು
- ಯಾಲಕ್ಕಿ 6

ಮಾಡುವ ವಿಧಾನ

- ತೆಂಗಿನ ಕಾಯನ್ನು ಸಣ್ಣಗೆ ತುರಿದುಅದನ್ನು ರುಬ್ಬಿ ಹಾಲನ್ನು ಮಾತ್ರ ತೆಗೆದಿಟ್ಟುಕೊಳ್ಳಿ.
- 1 1/2 ಗಂಟೆಯ ಕಾಲ ನೆನೆಸಿದ ಅಕ್ಕಿ,ತೆಂಗಿನ ಹಾಲು,ಉಪ್ಪು,ಬೆಲ್ಲ ಯಾಲಕ್ಕಿ ಎಲ್ಲವನ್ನೂ ರುಬ್ಬಿಕೊಳ್ಳುವುದು
- ಇದನ್ನು ದಪ್ಪ ತಳದ ಪಾತ್ರೆಯಲ್ಲಿ ಒಲೆಯ ಮೇಲಿಟ್ಟು ಹದವಾಗಿ ಕೈ ಆಡಿಸುತ್ತಾ ಹಲ್ವದಂತೆ ಆಡಿಸುತ್ತಿರಿ
- ತುಪ್ಪ ಸವರಿದ ತಟ್ಟೆಯಲ್ಲಿ ಸುರಿದು ಗೋಡಂಬಿ ದ್ರಾಕ್ಷಿ ಉದುರಿಸಿ, ಬೆಚ್ಚಗಿರುವಾಗಲೇ ಚಾಕುವಿನಿಂದ ಚೌಕವಾಗಿ ಕತ್ತರಿಸಿಡಿ.
- ಪೂರ್ತಿ ಆರಿದ ನಂತರ ತಟ್ಟೆಯಲ್ಲಿ ಜೋಡಿಸಿ ಇಟ್ಟು ಸವಿಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ನಾರಾಯಣ ಕಟ್ಟಿಸಿದ ಭಾವಿ, ನಾಲ್ಕು ಮೂಲೆ ಬಾವಿ , ನೀರಿಲ್ಲ, ಮೀನಿಲ್ಲ

೨. ಕಣ್ಣಿಗೆ ಹತ್ತಿರ , ಕಾಲಿಗೆ ದೂರ

ಉತ್ತರಕ್ಕೆ ಪುಟ ೧೪ ನೋಡಿ

ಸ್ನೇಹದ ಬೆಳದಿಂಗಳೂಟ ...

ನಿಮ್ಮಯ ಮನೆಯ ಬಿಸಿ ಭೋಜನಕೆ
ಕಾತರದೀ ನಾವ್ ಕಾದಿಹೆವು,
ಆದರ ಪೂರ್ವಕ ನಿಮ್ಮಾಹ್ವಾನವ
ಸ್ವೀಕರಿಸೀ ನಾವ್ ಬಂದಿಹೆವೂ.

ಸತ್ವಪೂರಿತ ಮಾತುಕತೆಗಳೂ
ವ್ಯಂಜನವಿಂದು ಆಗಿರಲೀ
ತಿಳಿನಗೆ ಹಾಸ್ಯವು ಬೆರಸಿ ಕಲೆಸಿದ
ಸ್ವರಗಳೋಗರವು ನಡುವಿರಲೀ

ನಗುಮೊಗದಿಂದಲಿ ಒಳಗಡೆ ಕರೆಯಲು
ಅದುವೇ ತಂಪಿನ ಶರಬತ್ತೂ,
ಕಣ್ಣಲಿ ಕಂಡಾ ಪ್ರೀತಿಯ ಭಾವವೆ
ನಮ್ಮ ಮನವಾ ಸೆಳೆದಿತ್ತೂ.

ನಿಮ್ಮಯವರಿವಿನ ನುಡಿಮುತ್ತುಗಳಾ
ವಿಶೇಷ ಭಕ್ಷ್ಯವು ನಮಗಿರಲೀ,
ಕೇಳುತಲಿರಲೂ ಬಡಿಸುತಲಿರುವಾ
ಅಕ್ಷಯ ಪಾತ್ರೆಯು ನಿಮಗಿರಲೀ.

ಸ್ವಚ್ಛ ಮನಸಿನ ವಿಶಾಲ ಹೃದಯವೆ
ಅಚ್ಚ ಹಸಿರಿನಾ ಬಾಳೆಲೆಯೂ,
ಜೇನಿನ ಸವಿಯಾ ಕುಶಲೋಪರಿಯೇ
ಹಬ್ಬದೂಟದಾ ಪಾಯಸವೂ.

ಬೇಕದು ಭಾಗ್ಯವು ದೊರೆಯಲು ನಮಗೆ
ಇಂತಹ ಸೊಗಸಿನ ಪಾಕಾನ್ನ
ಅನಂತ ತೃಪ್ತಿಯ ತೇಗನು ತಂದಿತು
ನಿಮ್ಮಯ ಸ್ನೇಹದ ಪರಮಾನ್ನ

– ನಾಗಶೈಲ ಕುಮಾರ್, ಸಿಡ್ನಿ

ಬಿನ್ನಹ ...

ದೀಪ ಬೆಳಗುವೆ ದೇವ
ನಿನ್ನ ಮುಂದೆ
ತಾಪವೆಲ್ಲವ ಅಳಿಸೊ
ನನ್ನ ತಂದೆ

ಹೂವನಿಡುವೆನೊ ದೇವ
ನಿನ್ನ ಅಡಿಗೆ
ಶಾಂತಿ ಸುಖವನು ಕಳಿಸು
ನನ್ನ ಎಡೆಗೆ

ಹಾಲನೆರೆಯುವೆ ದೇವ
ನಿನ್ನ ಮೈಗೆ
ಬೊಗಸೆ ಭರವಸೆ ಇಳಿಸು
ನನ್ನ ಕೈಗೆ

ಹೊನ್ನ ಕೊಡುವೆನೊ ದೇವ
ನಿನ್ನವರಿಗೆ
ಇಹದ ಬಂಧನ ಬಿಡಿಸೊ
ನನ್ನ ಮೊರೆಗೆ

ಹಾಡಲುಳಿಸುವೆ ದೇವ
ನಿನ್ನ ಮಹಿಮೆ
ನನ್ನ ಪೊರೆಯುತಲಿರಲಿ
ನಿನ್ನ ಹಿರಿಮೆ

ಬಣ್ಣ ಬಳಿಸುವೆ ದೇವ
ನಿನ್ನ ಗುಡಿಗೆ
ಒಳಗಣ್ಣ ತೆರೆಸುವೆಯ
ನಿನ್ನ ಕುಡಿಗೆ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಈ 'ನನ್ನ' ಊರಿಗೆ ಸೂರಿಲ್ಲದಿದ್ದರೂ ಸುಂದರವಾಗಿದೆ



೨. ಸೂರ್ಯನನ್ನು ತಂದೆಯೆಂದು ಸಂಬೋಧಿಸಿದರೆ

೩. ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ?

೪. ಕರ್ನಾಟಕವು ಯಾವ ಗುಡಿ

೫. ಜಾತಿ ಭೇದದ ಸೋಂಕು ಕಾಣದ ಈ

ಕುಲವು ಹೆಚ್ಚಿದಷ್ಟೂ ಸಮಾಜಕ್ಕೆ ಗೌರವವು

೬. ಕಸವನ್ನು ಎಸೆಯದಿದ್ದರೆ ತೆಗೆಯಬಹುದಾದದ್ದು?

ಮಾಡಬೇಕಾದ ಪದ ಗುಚ್ಛ:-

ಚಂದದ ಊರಿನೊಡನಿರುವುದು ದೀರ್ಘವಾದ ಸರವಲ್ಲ. ಇದೊಂದು ಉತ್ಸವ



ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಅಕ್ಟೋಬರ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಆಗಸ್ಟ್ ಪದ ಪುಂಜ - ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಶಾರದ ಅರವಿಂದ್, ಕೆಂಗೇರಿ ಉಪನಗರ
- ವತ್ಸಲಾ ದ್ವಾರಕನಾಥ್
- ಅನು ಶಿವರಾಂ, ಸಿಡ್ನಿ
- ಹರಿಣಿ ರಾವ್, ನವದೆಹಲಿ

೧. ಈ ಹುಡುಗಿಯ ಹೆಸರಿನಲ್ಲೇ ಇದೆಯಲ್ಲ ನಯವಾದ ಅವಳ ಗುಣ.

ವಿ	ನ	ಯ

೨. ಎಲ್ಲರ ಸಮ್ಮುಖದಲ್ಲಿ ನಡೆಯಲು ಅತಿ ಮುಖ್ಯವಾಗಿ ಬೇಕಾದ ಒಪ್ಪಿಗೆ.

ಸ	ಮ್ಮ	ತಿ

೩. ನಾಡಿನ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ?

ಹೆ	ದ್ದಾ	ರಿ

೪. ಕವಳದವನಿಗೆ ಹೆಚ್ಚಾದ ಚಿಂತೆ.

ಕ	ಳ	ವ	ಳ

೫. "_ _ನಿನ್ನಿಂದ ನಾ ಕೆಟ್ಟೆ". ಎಂದಿರಲ್ಲ. ಯಾವುದರಿಂದ ಹೇಳಿ?

ಹೊ	ಟ್ಟೆ

೬. ಯೋಗ್ಯರು, ಭೋಗ್ಯರು, ಭಾಗ್ಯವಂತರು ಆಗಿ ತರಬೇಕಾದ್ದು.

ರಾ	ಗಿ

ಮಾಡಬೇಕಾದ ಪದ ಗುಚ್ಛ:-

ಕಾಲಿಲ್ಲದವನ ಕೆರೆಯ ಊರಿನಿಂದ ಬಂದ ದಾಸ ಸಾಹಿತ್ಯದ ಈ ಶ್ರೇಷ್ಠ ಕವಿಯಿತ್ರಿ. ಪರ್ವತರಾಜ ಕುವರಿಯೇನಲ್ಲ.

ಹೆ	ಳ	ವ	ನ	ಕ	ಟ್ಟೆ	ಗಿ	ರಿ	ಯ	ಮ್ಮ

ATTENTION INVESTORS

NEW HOMES AT BLAKES CROSSING
ONLY 31KM FROM ADELAIDE CBD

Turnkey investment packages
from under $299,000*

Deposit only $2,000*

BOOK AN APPOINTMENT WITH UMESH TODAY TO START YOUR INVESTMENT JOURNEY!

Call 0401 034 456
Email umesh.nagasandra@burbank.com.au

*Terms & conditions apply

Burbank
#noplacelikehome

ಜಾಣ ಕರ್ನಾಟಕ

೧. ಕರ್ನಾಟಕದ ಏಕೈಕ ಪ್ರಾಕೃತಿಕ ಬಿಸಿನೀರಿನ ಹೊಂಡ ಯಾವುದು? ಇದು ಎಲ್ಲಿದೆ.

೨. ತಲಪರಿಗೆ ಎಂದರೇನು? ಪ್ರಮುಖವಾಗಿ ಇವು ಕರ್ನಾಟಕದ ಯಾವ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತವೆ?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಒಗಟು - ಉತ್ತರ

೧. ಬೆಲ್ಲದ ಅಚ್ಚು ೨. ದಿಗಂತ

ಹಾಸ್ಯ ಚಿಲುಮೆ

ಡಾಕ್ಟರ್: ಒಂದೇ ಸಲ ನಾಲ್ಕು ಹಲ್ಲು ಏಕೆ ಹೋಯ್ತು?

ಗುಂಡ: ನನ್ನ ಹೆಂಡತಿ ಚಕ್ಕುಲಿ ಮಾಡಿದ್ದು.....

ಡಾಕ್ಟರ್: ಬೇಡಾ ಅನ್ಬೇಕಿತ್ತು ಅಲ್ವಾ?

ಗುಂಡ:ಆಯ್ಯೋ ತಿಂದಿದ್ದಕ್ಕೆ ಒಂದು ಹೋಯ್ತು,ಬೇಡಾ ಅಂದದ್ದಕ್ಕೆ ಇನ್ನೂ ಮೂರು ಹೋಯ್ತು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಢಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಅಕ್ಕಾ ತೊಗೊಳ್ಳಿ, ನಿಮಗೇಂತ ನಮ್ಮ ಬೇಕರಿ ಸೋಮಣ್ಣ ಹತ್ರ ಹೇಳಿ ಬಿಸಿಬಿಸಿ ರಾಗಿ ಬಿಸ್ಕತ್ ಕಟ್ಟಿಸಿಕೊಂಡು ತಂದಿದ್ದೀನಿ"
ಅಕ್ಕನಿಗೆ ಪೂರ್ತಿ ಗಲಿಬಿಲಿ, ಅಷ್ಟಾಗಿ ಪರಿಚಯವೇ ಇಲ್ಲದ ಈ ಹುಡುಗ, ಎಷ್ಟು ಸಲುಗೆಯಿಂದ ಮಾತನಾಡಿಸುತ್ತಿದ್ದಾನೆ. ತಮ್ಮನ ಸ್ನೇಹಿತ ಎಂದೇನೋ ಗೊತ್ತು, ಆದರೆ ಹೆಸರು ಕೂಡ ತಿಳಿಯದಲ್ಲ. ಎಷ್ಟು ಸಂಭಾವಿತ ಹುಡುಗ ಎಂದು ಮಾರುಹೋಗಿ, "ಅಯ್ಯೋ ಸುಮ್ನೆ ಇದೆಲ್ಲಾ ಯಾಕಪ್ಪಾ ತರೋಕ್ಕೆ ಹೋದೆ, ಏನಪ್ಪಾ ನಿನ್ನ ಹೆಸ್ರೂ", ಎಂದರು.
"ಸತ್ತೀ ಅಂತ ಕರೀರಿ ಅಕ್ಕ, ನನ್ನೂ ನಿಮ್ಮ ತಮ್ಮ ಸದಾ ತರಾನೆ ಅಂದ್ಕೊಳಿ. ನೀವು ಬಾಣಂತಿ ಅಂತ ಗೊತ್ತಿದ್ದೂ ಅದು ಹೇಗಕ್ಕ ಬರಿಗೈಲಿ ಬರೋದು, ಈ ಟೈಮ್ ನಲ್ಲಿ ನಿಮ್ ಮೈಗೆ ಶಕ್ತಿ ಬೇಕೂಂತಾನೆ ಹೇಳಿ ರಾಗಿ ಬಿಸ್ಕತ್ತು ತಂದೆ. ಮುಂದಿನ್ ಸಲ ತುಮಕೂರಿಗೆ ಹೋದಾಗ ಇನ್ನೂ ಜಾಸ್ತೀನೆ ತರ್ತೀನಿ ಬಿಡಿ ಅಕ್ಕ".
ಅಕ್ಕ ಹಳ್ಳಕೆ ಬಿದ್ದಾಗಿತ್ತು.
"ಅಯ್ಯೋ ಅಯ್ಯೋ, ಮಗು ನೋಡೊ ಸದಾ, ಎಷ್ಟು ಮುದ್ದಾಗಿದೆ, ಹೆಣ್ಣಾ? ಗಂಡಾ? ಸದಾ?"
"ಹೆಣ್ಣು ಮಗೂನಪ್ಪಾ", ಅಕ್ಕನೇ ಉತ್ತರಿಸಿದರು.
"ಹೌದಾ? ಗಂಡೇನಾದ್ರೂ ಆಗಿದ್ದಿದ್ರೆ, ಕೃಷ್ಣ ಅನ್ನೋದ್ ಬಿಟ್ಟು ಬೇರೆ ಯಾವ ಹೆಸ್ರು ಇಟ್ಟಿದ್ರೂ ಮೋಸ ಆಗ್ತಿತ್ತು. ಅಷ್ಟು ಅಂದ, ಅಷ್ಟು ಕಳೆ ಈ ಮಗೂಗೆ, ತಗೋ ಪುಟ್ಟ ಈ ಬಿಸ್ಕತ್ ಪ್ಯಾಕೆಟ್ ನಿಂಗೆ", ಎನ್ನುತ್ತಾ ಇನ್ನೂ ಕಣ್ಣೂ ಸರಿಯಾಗಿ ಬಿಡದ ಮಗುವಿನ ಬಳಿ ಬಿಸ್ಕತ್ತಿನ ಪೊಟ್ಟಣವಿಟ್ಟ.
ಆಗಿನಿಂದಲೂ ಅವನನ್ನೇ ಗಮನಿಸುತ್ತಿದ್ದ ಅಕ್ಕ ಮತ್ತಷ್ಟು ಹಳ್ಳಕ್ಕೆ ಜಾರಿದ್ದರು.
ಅಷ್ಟರಲ್ಲಿ "ಏನಪ್ಪಾ ಸತ್ಯಾ ಚೆನ್ನಾಗಿದ್ದೀಯ" ಎನ್ನುತ್ತಾ ಅಮ್ಮ ಒಳಗಿನಿಂದ ಹೊರಬಂದಿರದಿದ್ದಲಿ ಅಕ್ಕನನ್ನು ಇನ್ನೂ ಒಳಕ್ಕೇ ತಳ್ಳಿಬಿಟ್ಟಿರುತ್ತಿದ್ದ.
ಅಮ್ಮನನ್ನು ನೋಡುತ್ತಿದ್ದ ಹಾಗೆಯೇ ನಡುವನ್ನು ಸಂಪೂರ್ಣ ಬಗ್ಗಿಸಿ ಎರಡೂ ಕೈಜೋಡಿಸಿ ನಮಸ್ಕಾರ ಮಾಡಿ,
" ಅಮ್ಮ ನಿಮ್ಮ ಮನಗೆ ಬಂದ್ರೆ ಆ ಹೊರನಾಡಿಗೇ ಹೋದ ಹಾಗೆ" ಎಂದ.
" ಅದೇನಪ್ಪಾ ಅದು ಹಾಗೆ ಹೇಳ್ತೀಯಾ" ಅಂದ್ರು ಅಮ್ಮ.
" ಇನ್ನೇನಮ್ಮ ಆಲ್ಲಿನ ತಾಯಿ ಅನ್ನಪೂರ್ಣೇಶ್ವರೀನೆ ನೋಡಿದ ಹಾಗೆ ಆಗುತ್ತೆ ನಿಮ್ಮನ್ನ ನೋಡಿದ್ರೆ", ಪರಮ ಭಕ್ತನಂತೆ ನುಡಿದ.
" ಹೌದೌದು, ನಿನಗೆ ಹಸಿವಾದಾಗ ಯಾರನ್ನ ನೋಡಿದ್ರು ಅನ್ನಪೂರ್ಣೇಶ್ವರಿ ತರ ಕಾಣ್ತಾರೆ, ನಿನಗೆ ದುಡ್ಡು ಬೇಕಾದಾಗ ಗೊರವನಹಳ್ಳಿ ಮಹಾಲಕ್ಷ್ಮಿ ತರಾನೂ ಕಾಣ್ತಾರೆ", ನಾನು ರೇಗುತ್ತಾ ನುಡಿದೆ.
" ಕೈಕಾಲು ತೊಳ್ಕೊಂಡು ಬಾಪ್ಪ, ಎಲ್ಲರ ಜೊತೇಗೇ ನೀನೂ ಊಟ ಮಾಡುವಿಯಂತೆ", ಅಮ್ಮ ನುಡಿದರು.
"ಎಲ್ರೂ ಜೊತೇನಾ!!, ಮೊದ್ಲು ಅವನಿಗೆ ಬಡಿಸು, ಆಮೇಲೆ ಉಳಿದವರ್ದು," ಎಂದೆ.
ಆರು ಜನಕ್ಕೆಂದು ಮಾಡಿದ್ದ ಅನ್ನ ಖಾಲಿಯಾಗಿ ತಳ ಕಾಣುವ ವೇಳೆಗೆ ಸತ್ಯ, " ಅಮ್ಮ ನಿಮ್ಮ ಕೈ ತುಂಬಾ ದೊಡ್ಡದು, ಇನ್ನು ನನ್ನ ಕೈಲಾಗಲ್ಲ. ಇಂತ ಸೊಗಸಾದ ಹಲಸಿನ ಕಾಯಿ ಹುಳೀನಾ ಇದೂವರ್ಗೂ ನಾನೆಲ್ಲೂ ತಿಂದಿರಲಿಲ್ಲ", ಎನ್ನುತ್ತಾ ಡರ್ರೆಂದು ತೇಗಿದ. ಅದೂ ಸುತ್ತಲಿನ ಪರಿವೆಯೇ ಇಲ್ಲದಂತೆ ಐದೇ ನಿಮಿಷದಲ್ಲಿ ಊಟ ಮುಗಿಸಿದ್ದ.
" ಅವಸರ ಪಡಬೇಡಪ್ಪಾ, ನಿಧಾನಕ್ಕೆ ತಿನ್ನು, ನಾನು ಬಡಿಸುತ್ತೇನೆ" ಅಂತ ಅಮ್ಮ ಅಂದದ್ದಕ್ಕೆ, " ಆಮ್ಮಾ, ಅನ್ನ ಲಕ್ಷ್ಮಿ ತರ, ಅದಕ್ಕೆ ನಾನು ಅದನ್ನ ಅಗಿಯೋದಿಲ್ಲ", ಎಂದು ಉತ್ತರಿಸಿದ್ದ ಭೂಪ.
ಹೀಗೇ ನಮ್ಮ ಮನೆಯಲ್ಲಿ ಮಾತ್ರವಲ್ಲ, ಯಾರ ಮನೆಗೆ ಹೋದರೂ ಚೆನ್ನಾಗಿ ನಾಟಕವಾಡುತ್ತಾ, ಊಟ ತಿಂಡಿಗಳಿಗೆ ದಾರಿ ಮಾಡಿಕೊಳ್ಳುವುದಲ್ಲದೆ, ಅವರನ್ನು ಮರುಳು ಮಾಡಿ ಅವರ ವಿಶ್ವಾಸ ಗಳಿಸಿಕೊಳ್ಳುತ್ತಿದ್ದ.
ಇತ್ತೀಚೆಗಂತೂ ಅವನ ನಿಜಸ್ವರೂಪ ತಿಳಿಯಲಾರಂಭಿಸಿದ್ದ ನನಗೆ , ಜನರನ್ನು ಎಷ್ಟು ಸಲೀಸಾಗಿ ಮೋಸ ಮಾಡುತ್ತಾನೆ ಎಂದು ಆಶ್ಚರ್ಯವಾಗುತ್ತಿತ್ತು.
ಒಂದು ದಿನ ಶಾಂತಮ್ಮತ್ತೆಯ ಮನೆಯಲ್ಲಿ ನಡೆದ ಘಟನೆಯನ್ನು ನೀವು ನೋಡಬೇಕಿತ್ತು.
ಅಂದು ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ, ಎದುರಿಗೆ ಬಂದ ಸತ್ಯ," ಪುಟ್ಟ ನನ್ನ ಕಾಲೋನಿ ರಾಮಮಂದಿರದ ಹತ್ರ ಬಿಡ್ತೀಯಾ, ಸ್ವಲ್ಪ ಕೆಲ್ಸ ಇದೆ", ಅಂದ. ಅವನಿಗೇನಾದ್ರೂ ನಮ್ಮಿಂದ ಕೆಲಸ ಆಗ್ಬೇಕಿದ್ರೆ, ಪುಟ್ಟ, ರಾಜ, ಬಂಗಾರಿ ಅಂತೆಲ್ಲಾ ಬೆಣ್ಣೆ ಹಚ್ತಿದ್ದ. ಸರಿ ನನ್ನ ಸ್ಕೂಟರ್ನಲ್ಲಿ ಕರ್ಕೊಂಡು ಹೊರಟೆ. ಗಾಂಧಿಬಜಾರ್ ನ ಸನ್ನಿಧಿ ರಸ್ತೆಯಲ್ಲಿ ನಮ್ಮ ಶಾಂತತ್ತೆ ಮನೆ, ಅವರ ಮನೆಯ ಮುಂದೆಯೇ ಹೋಗಬೇಕು ನಾನು. ಅಕಸ್ಮಾತ್ ಅವರು ಈಚೆ ನಿಂತಿದ್ದರೆ ನಾನು ಅವರನ್ನು ಮಾತನಾಡಿಸಿಯೇ ಮುಂದೆ ಹೋಗುತ್ತಿದ್ದೆ.

ಮುಂದಿನ ಪುಟ ನೋಡಿ ...

ಅಂದು ಸತ್ಯ ಸ್ವಲ್ಪ ಬೇಗ ಬೇಗ ನಡಿ ಎಂದು ಅವಸರಿಸುತ್ತಿದ್ದ. ಆದರೆ ಅತ್ತೆ ನೋಡಿ ಕರೆದೇ ಬಿಟ್ಟರು. ನಾನು ಒಳ ಹೋಗಲು ಹಿಂದೇಟು ಹಾಕಿದೆ. ಅವರ ಮನೆಯ ಗೇಟಿನ ಬಳಿಯೇ ಒಬ್ಬರಿಗೊಬ್ಬರನ್ನು ಪರಿಚಯಿಸಿ, ಇವನೂ ಅರ್ಜೆಂಟ್ನಲ್ಲಿ ಇದ್ದಾನೆ ಬೇಗ ಹೋಗಬೇಕು ಎಂದು ತಪ್ಪಿಸಿಕೊಳ್ಳಲು ನೋಡಿದೆ. ಅಷ್ಟು ಹೊತ್ತೂ ಅವಸರಿಸುತ್ತಿದ್ದ ಸತ್ಯ, ಅವರ ಭರ್ಜರಿ ಮನೆ, ಅತ್ತೆಯ ತೂಕದ (?) ವ್ಯಕ್ತಿತ್ವ ನೋಡಿ " ಹಾಗೇನಿಲ್ಲ ಶಾಂತತ್ತೆ, ನನಗೇನೂ ಅವಸರ ಇಲ್ಲ, ಇವನ್ಯಾವಾಗ್ಲೂ ಹಾಗೇ, ದೊಡ್ಡೋರಿಗೆ ಮರ್ಯಾದೆ ಕೊಡೋದ್ ಬೇಡ್ವೇ? ಬಾರೋ ಸಾಕು, ಒಂದ್ ಹತ್ನಿಮ್ಷ ಮಾತಾಡ್ಕೊಂಡ್ ಹೋದ್ರಾಯ್ತು", ಎನ್ನುತ್ತಾ ಅವನೇ ಮುಂದೆ ನಡೆದಿದ್ದ. ಸರಿ ವಿಧಿ ಇಲ್ಲದೆ ಅವನನ್ನು ಹಿಂಬಾಲಿಸಿದೆ.

ಒಳಗೆ ಪಂಚಾಂಗ ಹಿಡಿದು ಕುಳಿತಿದ್ದ ಗೋಪಾಲ ಮಾವ, ಅತ್ತೆಯೊಡನೆ ಒಳನಡೆದ ಸತ್ಯನನ್ನೇ ಒಂದು ನಿಮಿಷ ದಿಟ್ಟಿಸಿ ನೋಡಿ, ಇದ್ದಕ್ಕಿದ್ದ ಹಾಗೆ ಕೈಲಿದ್ದ ಪಂಚಾಂಗ ಪಕ್ಕಕ್ಕಿಟ್ಟು, ದಢಕ್ಕನೆ ಎದ್ದು ನಿಂತು "ಬನ್ನಿ ಬನ್ನಿ" ಎಂದರು, ಜೊತೆಯಲ್ಲಿದ್ದ ನನ್ನನ್ನು ನೋಡಿ, " ಸದಾ, ಇವರು ನಿನಗೆ ಪರಿಚಯ ಏನೋ?" ಎಂದರು.

" ಹೌದು ಮಾವಾ, ನಾವಿಬ್ರು ಒಟ್ಟಿಗೆ ಕೆಲ್ಸ ಮಾಡೋದು, ಯಾಕೆ ಮಾವಾ? ನಿಮ್ಗೂ ಗೊತ್ತ ಇವನು?" ಅವರ ನಡಳಿಕೆಯಿಂದ ಆಶ್ಚರ್ಯ ಚಕಿತನಾಗಿ ಕೇಳಿದೆ?.

ನನ್ನ ಮಾತನ್ನು ಕಡೆಗಣಿಸಿ ಮಾವ, ಉತ್ಸುಕತೆಯಿಂದ " ನಿಂಗೆ ಗೊತ್ತಾಗ್ಲಿಲ್ವೇನೆ ಇವರು ಯಾರೂ ಅಂತ?", ಎಂದು ಅತ್ತೆಯನ್ನು ಕೇಳಿದರು.

"ಇವರ ಮುಖ ಪರಿಚಯ ಚೆನ್ನಾಗಿ ಇರೋ ಹಾಗಿದೆ, ಆಗ್ಲಿಂದ ಯೋಚ್ನೆ ಮಾಡ್ತಿದ್ದೀನಿ, ಎಲ್ಲಿ ನೋಡಿದ್ದೀನಿ ಇವರನ್ನ ಅಂತ, ಗೊತ್ತಾಗ್ತನೇ ಇಲ್ಲಾಂದ್ರೆ. ಎಲ್ಲಿ ನೋಡಿ

ದ್ದೀವಿ ಹೇಳಿ?" ಎನ್ನುತ್ತಾ ಅತ್ತೆ ಮಾವನನ್ನೇ ಪ್ರಶ್ನಿಸಿದರು.

"ಏ ಮೊನ್ನೆ ಈಶ್ವರನ ದೇವಸ್ಥಾನದಲ್ಲಿ ರಥೋತ್ಸವದ ದಿನ ಹರಿಕಥೆ ಮಾಡ್ತಿದ್ದ ದಾಸರು ಇವರೇ ಅಲ್ವೆ?", ಮಾವ ಗೆದ್ದ ಧ್ವನಿಯಲ್ಲಿ ನುಡಿದರು.

"ಅಯ್ಯೋ ಹೌದಲ್ವಾ, ನಂಗೆ ಗೊತ್ತಾಗ್ಲೆ ಇಲ್ಲ ನೋಡಿ, ನಿಂತೇ ಇದ್ದೀರಲ್ಲಪ್ಪಾ ಕೂತ್ಕೋಳಿ. ಆಹಾ ಅವತ್ತಂತೂ ಅದೇನ್ ಕಳೆ, ಅದೇನು ಕಂಚಿನ ಕಂಠಾ, ಅಬ್ಬಬ್ಬ ಈ ಚಿಕ್ಕ ವಯಸ್ಸಿಗೇ ಅದೇನು ಪಾಂಡಿತ್ಯಾ, ತುಂಬಾ ಸೊಗಸಾಗಿತ್ತಪ್ಪ ನಿಮ್ಮ ಹರಿಕಥೆ. ನೀವು ನಮ್ಮನೇಗೆ ಬಂದಿರೋದು ನಮ್ಮ ಪುಣ್ಯಾಪ್ಪ".

ನನಗಂತೂ ಕಕ್ಕಾಬಿಕ್ಕಿ. ಅವರುಗಳು ಅದೇನ್ ಮಾತಾಡ್ತಿದ್ದಾರೆ ಅಂತಾ ಅರ್ಥಾನೆ ಆಗ್ತಿರಲಿಲ್ಲ.

"ಅಲ್ವೋ ಸದಾ, ಇಷ್ಟು ದಿನ ಇವರ ಪರಿಚಯಾನೇ ಮಾಡಿಕೊಟ್ಟಿಲ್ಲವಲ್ಲೋ. ಹೇಳ್ಬಾರ್ದ ನಮ್ಗೆ, ಈ ತರ ನಮ್ಮ ಸ್ನೇಹಿತ್ರು ಕಥಾಕಾಲಕ್ಷೇಪ ಮಾಡ್ತಾರೆ ಅಂತ, ಪಕ್ಕದಲ್ಲೇ ಇರೋ ನಮ್ಮನೇಗೆ ಊಟ, ತಿಂಡೀಗ್ ಬನ್ನಿ ಅಂತನಾದ್ರೂ ಹೇಳಬಹುದಿತ್ತು", ಅತ್ತೆ ಮುಂದುವರೆಸಿದ್ದರು ಮತ್ತೆ.

" ಅಯ್ಯೋ ಅದೆಲ್ಲಾ ಇವನಿಗೆ ಗೊತ್ತಾಗ್ ಬೇಕಲ್ಲ ಶಾಂತತ್ತೇ, ಹೋಗ್ಲಿ ಬಿಡಿ ಇನ್ಮೇಲೆ ನೀವು ಹೇಳೋದೆ ಬೇಡ, ದೇವಸ್ಥಾನಕ್ಕೆ ಬಂದಾಗಲೆಲ್ಲ, ನಾನೇ ನಿಮ್ಮನೇಗೆ ಬಂದು ಬಿಡ್ತೀನಿ".

" ಹಾಗೇ ಮಾಡೀಪ್ಪ ನೀವು, ಸದಾ ನಿಮ್ಜೊತೆ ಇರ್ಲೇ ಬೇಕೂಂತೇನಿಲ್ಲ, ಯಾವಾಗ ಬೇಕಾದ್ರು ಬನ್ನಿ, ಏನೋ ನಮ್ ಪುಣ್ಯ."

ನನಗೆ ಮೈಯೆಲ್ಲಾ ಉರಿಯುತ್ತಿತ್ತು. ಎಷ್ಟು ನಾಟಕ ಆಡ್ತಾ ಇದ್ದಾನೆ ಇವನು. ದೇವ್ರು ದಿಂಡ್ರು ಅಂತ ಅತಿಯಾಗಿ ನಂಬೋ ಇವರು ನಾನು ಏನೇ ಹೇಳಿದ್ರು ಕೂಡ ನಂಬಲ್ಲ. ಇಲ್ದೇ ಇದ್ರು ಕೂಡ ಇವನಾಡೋ ಬೆಣ್ಣೆಯಂತ

ಮಾತುಗಳನ್ನ ನಂಬದೇ ಇರೋರು ತುಂಬಾನೇ ಕಮ್ಮಿ.

" ಇವನು ಹರಿಕಥೆ ಬೇರೆ ಮಾಡ್ತಾನಾ? ಈ ವೇಷ ಹಾಕೋದು ಯಾವಾಗಿಂದ ಶುರು ಮಾಡ್ಕೊಂಡ? ನೆಟ್ಟಗೆ ಒಂದು ನಮಸ್ಕಾರ ಮಾಡಲ್ಲ ಆ ದೇವರಿಗೆ, ಬೇಕಿದ್ರೆ ಹರಿಕಥೆ ಮಾಡಿ ದೇವಸ್ಥಾನದ ದುಡ್ಡನ್ ಕೂಡ ಲಪಟಾಯಿಸ್ತಾನೆ ಈ ಕೊರಮ," ಅಂತ ನಾನು ಯೋಚ್ನೆ ಮಾಡ್ತಿದ್ರೆ, ಅತ್ತೆ ಮಾವ ಅವನ ಹತ್ರ ಒಂದು ದೇವರನಾಮ ಹಾಡಿ ಅಂತ ಬಲವಂತ ಮಾಡ್ತಿದ್ರು.

" ಇಲ್ಲ ಅತ್ತೆ ಹೊರಡ್ಬೇಕು ಈಗಾಗ್ಲೇ ಸಾಕಷ್ಟು ಹೊತ್ತಾಗಿದೆ, ಅವನು ಬೇರೆ ಯಾವ್ದೋ ಕೆಲ್ಸ ಇದೆ ಅಂತ ಹೇಳ್ತಿದ್ದ, ನಡಿಯೋ ಸತ್ಯ ಹೊತ್ತಾಗ್ತಾ ಇದೆ," ಎನ್ನುತ್ತಾ ಅವನನ್ನೂ ಎಳೆದುಕೊಂಡು ಹೊರಡಲು ನೋಡಿದೆ.

"ಅತ್ತೆ ಕೇಳಿದ ಮೇಲೆ ಹಾಡುಹೇಳಲ್ಲಾ ಅಂತ ಹೇಳಕ್ಕೆ ಹೇಗೋ ಬಾಯಿಬರುತ್ತೆ? ದೇವಸ್ಥಾನದಲ್ಲಿರೋ ಆ ದೇವರ ಮುಂದೆ ಹಾಡ್ದೆ ಇದ್ರೂ ಪರವಾಗಿಲ್ಲ, ಆದ್ರೆ ದೇವ್ರಂತ ಈ ದೊಡ್ಡೋರ ಮುಂದೆ ನಾನು ಹಾಡ್ದೆ ಇರಲ್ಲ," ಎನ್ನುತ್ತಾ, ಗೋಡೆಯ ಮೇಲಿದ್ದ ವೆಂಕಟೇಶ್ವರನ ಚಿತ್ರವನ್ನೇ ನೋಡುತ್ತ ' ಪ್ರಭೂಜೀ ಬಾಲಾಜೀ,' ಎಂದು ಸುಶ್ರಾವ್ಯವಾಗಿ ಹಾಡಲಾರಂಭಿಸಿಯೇ ಬಿಟ್ಟ.

ಆವನ ಮೇಲೆ ಎಷ್ಟೇ ಕೋಪವಿದ್ದರೂ, ಅವನ ಹಾಡು ಮೈಮರೆಯುವಂತೆ ಮಾಡಿತ್ತು. ಅವನ ಹಾವ ಭಾವಗಳಂತೂ ನುರಿತ ಸಂಗೀತಗಾರರೂ ನಾಚುವಂತಿತ್ತು. ಹಾಡು ಮುಗಿಯುವ ವೇಳೆಗೆ ಆವನ ಕಣ್ಣುಗಳಲ್ಲಿ ದಳದಳ ನೀರಿಳಿಯುತ್ತಿತ್ತು. ಅತ್ತೆ ಮಾವ ಮೂಕರಾಗಿ ಕುಳಿತುಬಿಟ್ಟಿದ್ದರು. ಕರ್ಚೀಫಿನಿಂದ ಕಣ್ಣುಗಳನ್ನೊರೆಸಿಕೊಳ್ಳುತ್ತಾ, ಸತ್ಯ, "ಇನ್ನು ಹೊರಡೋಣ್ವ ಸದಾ," ಎಂದ.

ಮುಂದಿನ ಪುಟ ನೋಡಿ ...

" ಅಯ್ಯೋ, ಯಾಕೆ ಹಾಗೇ ಹೊರಡೋದು, ತಿಂಡಿ ಆಗಿದೆ, ತಿಂದ್ಕೊಂಡ್ ಹೊರಡಿ," ಎನ್ನುತ್ತಾ ಅತ್ತೆ ಎದ್ದು ಒಳ ನಡೆದರು.
ಒಂದು ಕಾಫಿ ದೊರಕಿಸಿಕೊಳ್ಳುವುದೂ ಕಷ್ಟವಾದ ಅತ್ತೆಯ ಮನೆಯಲ್ಲಿ ದೊಡ್ಡ ತಟ್ಟೆಯ ತುಂಬಾ ಬಿಸಿಬಿಸಿ ಪೂರಿ ಸಾಗು ಬಂದಾಗ " ತಿಮ್ಮಪ್ಪಾ, ಎಲ್ಲಾ ನಿನ್ನ ದಯೆ", ಎನ್ನುತ್ತಾ ನನ್ನ ಕಡೆಗೆ ಕೊಂಕು ನಗೆ ಬೀರಿ, ಹೊಟ್ಟೆಗಿಳಿಸಲಾರಂಭಿಸಿದ್ದ.
"ನೀವೇನೇ ಹೇಳಿ ಮಾವ, ಈ ಬ್ರಾಹ್ಮಣ ಜನ್ಮ ಪಡೆಯಕ್ಕೆ ಅದೆಷ್ಟು ಪುಣ್ಯ ಮಾಡಿದ್ದೀವೋ ನಾವು, ಆ ದೇವರ ಸೇವೆ, ಇಂತಾ ಸೊಗಸಾದ ಊಟ, ಎಲ್ಲಾ ಏಳೇಳು ಜನ್ಮದ ಪುಣ್ಯ," ಎನ್ನುವ ಮಾತುಗಳು ಬೇರೆ.
ಆಮೇಲೆ ಅತ್ತೆಯ ಮನೆಗೆ ನಾನಿರಲಿ, ಇಲ್ಲದಿರಲಿ ಅವನು ಹೋಗಿಬರಲಾಂಭಿಸಿದ್ದ. ದೇವಸ್ಥಾನದಿಂದ ಪ್ರಸಾದ, ದೇವರ ತಟ್ಟೆಯಿಂದಲೇ ನಿಮಗೆ ನೇರವಾಗಿ ತಂದಿರುವೆ ಎಂದು ಚೂರುಪಾರು ಅವರ ಕೈಗಿತ್ತು, ಅವರ ಕೈಯ್ಯಿಂದ ಚೆನ್ನಾಗಿ ಊಟ ತಿಂಡಿಗಳ ಉಪಚಾರ ಮಾಡಿಸಿಕೊಂಡು ಹೋಗುತ್ತಿದ್ದ.
ಅತ್ತೆ, ಮುಂಚಿನಂತೆ ನನ್ನನ್ನು ನೋಡಿ ಒಳಗೆ ಬಾ ಎನ್ನುವ ಬದಲು, ಎಲ್ಲಿ ಸತ್ಯ ಬರಲಿಲ್ಲವೇ ಎಂದು ಕೇಳಲಾರಂಭಿಸಿದ್ದರು.
ಇದು ನನ್ನ ಕಥೆ ಮಾತ್ರವಾಗಿರಲಿಲ್ಲ. ನನ್ನ ಹಲವಾರು ಸ್ನೇಹಿತರದೂ ಇದೇ ರೀತಿಯ ಕಥೆಗಳು ಕೇಳಲಾರಂಭಿಸಿತ್ತು. ಒಂದೊಂದು ಕಡೆಯೂ ಅವರ ಬಲಹೀನತೆಯ ಸುಳಿವನ್ನು ಹಿಡಿದು, ಅದಕ್ಕೆ ತಕ್ಕಂತೆ ವೇಷ ಧರಿಸುತ್ತಿದ್ದ.
ವಯೋಸಹಜವಾದ ಮಂಡಿ ನೋವಿನಿಂದ ನರಳುತ್ತಿದ್ದ ಬಾಲುವಿನ ಅಜ್ಜಿಗೆ, ತನ್ನ ತಾತ ಆಯುರ್ವೇದದ ಪಂಡಿತರು, ತಾನೂ ಕೂಡ ಸಣ್ಣಪುಟ್ಟ ಔಷಧಗಳನ್ನು ಕೊಡಬಲ್ಲೆನೆಂದು ಹೇಳಿಕೊಂಡು, ನಯವಾದ ಮಾತುಗಳಿಂದ ಅವರ ವಿಶ್ವಾಸಗಳಿಸಿದ್ದ. ಅವರ ಮನೆಗೆ ಆಗಾಗ್ಗೆ ಹೋಗುತ್ತಾ, ಯಾವುದೋ ತೈಲದಿಂದ ಅಜ್ಜಿಯ ಕಾಲುಗಳನ್ನು ನೀವುತ್ತಾ, ಅವರ ಕಾಲುನೋವು ವಾಸಿ ಮಾಡುವ ಆಶ್ವಾಸನೆ ನೀಡುತ್ತಿದ್ದ. ಅಜ್ಜಿ ಅವರ ಕಾಲುನೋವಿನ ಜೊತೆಗೇ, ಇತರ ನೋವುಗಳನ್ನೆಲ್ಲಾ ಹೇಳಿಕೊಳ್ಳುತ್ತಿತ್ತು. ಆಸಕ್ತಿಯಿಂದ ಕೇಳಿಸಿಕೊಳ್ಳುವಂತೆ ನಟಿಸುತ್ತಾ, ತನ್ನ ಗಮನವನ್ನೆಲ್ಲಾ ಒಳಗಿನಿಂದ ಬರಬಹುದಾದ ತಿಂಡಿ ತಿನಿಸುಗಳ ಕಡೆಗೆ ಹರಿಯಬಿಟ್ಟಿರುತ್ತಿದ್ದ. ಹೊರಡುವ ಮುನ್ನ ಅಜ್ಜಿಯ ಕೈಯ್ಯಿಂದ ಪುಡಿಗಾಸನ್ನು ಕೂಡ ಗಿಟ್ಟಿಸಿಕೊಳ್ಳದೆ ಬಿಡುತ್ತಿರಲಿಲ್ಲ.
ಅವನ ಬಲೆಗೆ ಸುಲಭವಾಗಿ ಬೀಳಿಸಿಕೊಳ್ಳಲು ಅವನು ಸಮಯಕ್ಕೆ ತಕ್ಕಂತೆ ಅಲಂಕಾರವನ್ನೂ ಮಾಡಿಕೊಳ್ಳುತ್ತಿದ್ದ. ಇಪ್ಪತ್ತೆರಡು-ಇಪ್ಪತ್ತಮೂರು ವರ್ಷಗಳಾದರೂ ಸಹಜವಾಗಿಯೇ, ಮುದ್ದುಮುದ್ದಾದ ಎಳೆಯ ಮಗುವಿನ ಮುಗ್ಧ ಮುಖ, ಅದಕ್ಕೆ ತೆಳುವಾಗಿ ಪೌಡರ್ ಲೇಪನ, ಹುಬ್ಬುಗಳ ನಡುವೆ ಹೆಂಗಸರಿಡುವಂತೆ ಕುಂಕುಮ. ಚೆನ್ನಾಗಿ ಎಣ್ಣೆ ಹಚ್ಚಿ, ಒಪ್ಪಾಗಿ ಬಾಚಿದ ತಲೆ. ಶುಭ್ರವಾಗಿ ಒಗೆದು ಇಸ್ತ್ರಿ ಮಾಡಿದ ಬಟ್ಟೆಗಳು.
ಅದೂ ಆವನು, ಮನೆಯಲ್ಲಿ ಹಿರಿಯ ಗಂಡಸರು ಇಲ್ಲದ ಸಮಯ ನೋಡಿಕೊಂಡೇ ಲಗ್ಗೆ ಹಾಕುತ್ತಿದ್ದ. ಹಾಗೆಂದು ಅವನು ಕಳ್ಳತನವಾಗಲೀ, ಅಥವಾ ಹಿಂಸಾಚಾರವಾಗಲೀ ನಡೆಸುತ್ತಿರಲಿಲ್ಲ. ಆದರೆ ಸುಳ್ಳು, ಮೋಸ, ನಯವಂಚಕತನಗಳಲ್ಲಿಯೇ ಸಾಕಷ್ಟು ಹಾನಿ ಮಾಡಿಬಿಡುತ್ತಿದ್ದ.
ಬಾಲುವಿನ ಅಜ್ಜಿಯ ಮಂಡಿ ನೋವು ಹೋಗುವುದಕ್ಕೆ ಮುಂಚೆಯೇ ಅಜ್ಜಿಯೇ ಹೋಗಿಬಿಟ್ಟಿತ್ತು. ಸತ್ಯನ ಔಷಧದ ಪ್ರಭಾವ ಗುಟ್ಟಾಗಿಯೇ ಉಳಿದು ಹೋಯಿತು.

ನಮ್ಮ ಇನ್ನೊಬ್ಬ ಸ್ನೇಹಿತ ನರೇಂದ್ರನ ಮನೆಯಲ್ಲಿ ನಡೆದ ಇನ್ನೊಂದು ಕಥೆ ಕೇಳಿ. ಒಮ್ಮೊಮ್ಮೆ ಭಾನುವಾರಗಳಂದು ಅವರ ಮನೆಗೆ ನಾನೂ, ಸತ್ಯ, ಮುಕುಂದ ಮುಂತಾದವರು ಹೋಗಿ ಅವರ ಮನೆಯ ಬಳಿ ಇದ್ದ ಹರಿಲಕ್ಷ್ಮಿ ಚಿತ್ರಮಂದಿರದಲ್ಲಿ ಸಿನೆಮಾಗೆ ಹೋಗುತ್ತಿದ್ದೆವು.
ಅಕಸ್ಮಾತ್ ಊಟದ ಸಮಯವಾಗಿದ್ದರೂ ಸಹ, ನರೇಂದ್ರನ ತಾಯಿ ನಮ್ಮನ್ನು ಊಟ ಮಾಡುವಂತೆ ಹೇಳುತ್ತಿರಲಿಲ್ಲ. ಸಾಧಾರಣವಾಗಿ ಭಾನುವಾರಗಳಂದು ಅವರ ಮನೆಯಲ್ಲಿ ಏನಾದರೂ ಮಾಂಸಾಹಾರದ ಅಡುಗೆ ಇದ್ದೇ ಇರುತ್ತಿತ್ತು. ಹಾಲು ಹಣ್ಣು ಏನಾದರೂ ಕೊಟ್ಟು ಉಪಚರಿಸುತ್ತಿದ್ದರು.
ಬೇರೆಯ ದಿನಗಳಲ್ಲಾದರೆ ಅವರು ಮಾಡಿದ ಪೂರಿ, ದೋಸೆ ಇತ್ಯಾದಿ ತಿಂಡಿಗಳನ್ನು ನಾವು ಇಷ್ಟಪಟ್ಟೇ ತಿನ್ನುತ್ತಿದ್ದೆವು.
ಒಂದು ದಿನ ಮಧ್ಯಾನ್ಹದ ವೇಳೆಯಲ್ಲಿ ಸತ್ಯನೊಬ್ಬನೇ ಅವರ ಮನೆಗೆ ಹೋದ.
" ಎಲ್ಲಮ್ಮ ನರೇಂದ್ರ ಇಲ್ವಾ?".
" ಇಲ್ಲಪ್ಪ ಯಾದೋ ಫ್ರೆಂಡ್ ಮದ್ವೆ ಅಂತ ಹೋಗಿದ್ದಾನಲ್ಲ, ಯಾಕೆ ನೀನು ಹೋಗ್ಲಿಲ್ವಾ?"
"ಅಯ್ಯೋ, ಹೌದಲ್ವಾ, ಅವನು ಮದ್ವೆಗೆ ಹೋಗಿರ್ತಾನೆ ಅನ್ನೋದ್ನ ಮರ್ತೇ ಬಿಟ್ಟಿದ್ದೆ. ಇರ್ಲಿ ಬಿಡಿ ಅಮ್ಮ, ನಿಮ್ಮನೆ ಏನು ಹೊಸದೆ ನನಗೆ? ತಗೊಳ್ಳಿ ಆಮ್ಮ ಈ ಹೂವು ಮತ್ತೆ ಸ್ವಲ್ಪ ತಿಂಡಿ ತಂದಿದ್ದೀನಿ".
"ಅಯ್ಯೋ ಯಾಕಪ್ಪಾ ಇದು , ಪ್ರತಿ ಸಲ ಬಂದಾಗ್ಲೂ ಏನೋ ಒಂದು ತರ್ತಾನೇ ಇರ್ತೀಯ?"
"ಆಮ್ಮ ನಿಮ್ಮನೇಗಲ್ದೆ ಇನ್ಯಾರ ಮನೆಗೆ ತೊಗೊಂಡು ಹೋಗ್ಲಿ ಹೇಳಿ, ಅಮ್ಮಾ,ಇದನ್ನೂ ತೊಗೊಳ್ಳಿ", ಮತ್ತೊಂದು ಚೀಲವನ್ನೂ ಅವರ ಕೈಗೆ ಕೊಡಲು ಹೋದ ಸತ್ಯ.

"ಏನಪ್ಪಾ ಅದು?" ಅನುಮಾನದಿಂದ ಕೇಳಿದ್ದರು ನರೇಂದ್ರನ ತಾಯಿ.
" ಅಮ್ಮಾ , ಪ್ರತಿ ಸಲ ನಿಮ್ಮನೇಗೆ ಬಂದಾಗ್ಲೂ ನಿಮ್ಮ ಕೈ ಊಟ ತಿನ್ನಬೇಕೆಂದು ತುಂಬಾ ಆಸೆಯಾಗುತ್ತಮ್ಮ, ನನಗಂತೂ ನಮ್ಮ ಆ ಸಾರಾನೇ ಇಲ್ದೆ ಇರೋ ಪುಳ್ಚಾರ್ ಊಟ ತಿಂದೂ ತಿಂದೂ ಬಾಯೆಲ್ಲಾ ಸತ್ತೇ ಹೋಗಿದೆ. ಅದಕ್ಕೆ ಇವತ್ತು ಮಾಂಸದೂಟ ತಿನ್ನ ಬೇಕು ಅಂತ ತೀರ್ಮಾನ ಮಾಡಿಬಿಟ್ಟಿದ್ದೀನಿ, ಅದಕ್ಕೆ.." ಒಂದೇ ಉಸುರಿಗೆ ಹೇಳಿ ನಿಲ್ಲಿಸಿ ಅವರ ಮುಖವನ್ನೇ ನೋಡಿದ .
ಅವನ ಒಂದೇ ಸಮನಾದ ಬಡಬಡಿಕೆ ಸರಿಯಾಗಿ ಅರ್ಥವಾಗದೆ ಕುತೂಹಲದಿಂದ ಅವನನ್ನೇ ನೋಡುತ್ತಿದ್ದರು.
ಅವರು ಏನೂ ಉತ್ತರಿಸದಿದ್ದಾಗ ಅವನೇ ನಿಧಾನವಾಗಿ ಮುಂದುವರೆಸಿದ," ಅದೂ ತಿಂದ್ರೆ ನಿಮ್ಮ ಕೈಯಲ್ಲಿ ಮಾಡಿದ್ದೇ ತಿನ್ನಬೇಕು ಅಂದ್ಕೊಂಡೂ ಬಿಟ್ಟಿದ್ದೀನಿ. ತಗೊಳ್ಳಿ ಆಮ್ಮ ನೀವು ಯಾವಾಗ್ಲೂ ತರೋ ಅಂಗಡಿಯಿಂದಾನೇ ತಂದಿದ್ದೀನಿ, ನೀವು ಏನ್ ಮಾಡ್ತಿರೋ ಮಾಡಿ ಹಾಕಿ ಆಮ್ಮ.....,
ನಿಮಗೆ ತೊಂದರೆ ಕೊಡ್ತಿದ್ದೀನಿ ಅನ್ಸುತ್ತೆ."
"ನಿನಗೆ ಊಟ ಹಾಕೋದು ನನಗೇನು ತೊಂದರೆ ಅಲ್ಲಪ್ಪ, ಆದರೆ ನೀನು ಮಾಡ್ತಾ ಇರೋದು ಚೆನ್ನಾಗಿಲ್ಲ, ನನಗಿಷ್ಟಾನೂ ಆಗ್ತಿಲ್ಲ. ಈ ತರ ಎಲ್ಲಾ ನೀನು ನಿಮ್ಮ ತಂದೆ ತಾಯೀಗೆ ಮೋಸ ಮಾಡ್ಬಾರ್ದು. ಬೇಕಿದ್ರೆ ನೀವು ತಿನ್ನೋ ಊಟಾನೆ ಮಾಡಿ ಹಾಕ್ತೀನಿ, ಹೊಟ್ಟೆ ತುಂಬಾ ತಿನ್ನು, ಆದ್ರೆ ಇನ್ನೊಂದ್ಸಲ ಹೀಗೆಲ್ಲಾ ಮಾಡ್ಬೇಡ". ನರೇಶನ ತಾಯಿ ಕಟ್ಟುನಿಟ್ಟಾಗಿ ನುಡಿದು ಕಳಿಸಿದ್ದರು

****

ಹಲವಾರು ಕಡೆ ಸ್ನೇಹಿತರ ಮನೆಗಳಲ್ಲಿ ಅವನ ಈ ಆಟ ಪುನರಾವರ್ತನೆಯಾಗಿತ್ತು. ಹಲವರು ಅಯ್ಯೋ ಪಾಪ ಎಂದು ಅವನು ಕೇಳಿದ್ದನ್ನು ಮಾಡಿ ಹಾಕಿದ್ದರೆ, ಆವನ ಬಗ್ಗೆ ಗೊತ್ತಿದ್ದ ಕೆಲವರು ಮತ್ತೊಮ್ಮೆ ಮನೆಯ ಕಡೆ ತಲೆ ಹಾಕಿದರೆ ಕಾಲು ಮುರಿದು ಕಳುಹಿಸುವುದಾಗಿ, ಬೈದು ಅಟ್ಟುತ್ತಿದ್ದರು. ಹಾಗೆ ಬೈದು ಕಳುಹಿಸಿದವರನ್ನು, ಕುಡಿದು ಬಂದು ಕೆಟ್ಟ ಮಾತುಗಳಿಂದನಿಂದಿಸುತ್ತಿದ್ದ. ಈ ನಡುವಿಗಂತೂ ಅವನ ನಡವಳಿಕೆ ಮೇರೆ ಮೀರುತ್ತಿತ್ತು. ಅವನಿಗೆ ಅತೀ ಹತ್ತಿರದ ಸ್ನೇಹಿತನಾಗಿದ್ದ ನನಗೆ, ಏನಾಯಿತು ಇವನಿಗೆ, ಯಾಕೆ ಹೀಗಾಡುತ್ತಿದ್ದಾನೆ ಎಂದು ಯೋಚನೆಯಾಗುತ್ತಿತ್ತು.
ಅವನೊಡನೆ ಮಾತನಾಡಿದರೆ, ತನ್ನ ತಪ್ಪನ್ನೆಲ್ಲಾ ಒಪ್ಪಿಕೊಂಡು," ಹೌದು, ನನಗೇನೋ ಆಗಿಬಿಟ್ಟಿದೆ, ಸ್ವಂತ ಕಂಟ್ರೋಲ್ ನಲ್ಲಿ ಇರಲು ಆಗುತ್ತಲೇ ಇಲ್ಲ. ಏನೋ ನಿನ್ನಂತ ಸ್ನೇಹಿತ ಇರೋ ಹೊತ್ತಿಗೆ ನನಗೆ ಬುದ್ಧಿ ಹೇಳ್ತೀಯ. ಇನ್ನು ಮುಂದೆ ಕೂಡ ಇದೇ ತರ ನೀನು ನನಗೆ ಅವಾಗಾವಾಗ ಎಚ್ಚರಿಕೆ ಕೊಡ್ತಾ ಇರು ಪುಟ್ಟ, ಆದಷ್ಟು ತಿದ್ಕೊಳಕ್ಕೆ ಪ್ರಯತ್ನ ಪಡ್ತೀನಿ," ಎಂದು ಹೇಳಿ, ಬಹಳ ಸಭ್ಯಸ್ಥನ ಹಾಗೆ ವರ್ತಿಸುತ್ತಿದ್ದ. ಎಲ್ಲರ ಬಳಿ ಕ್ಷಮೆ ಕೇಳಿ, ಆ ನಂತರ ಮೌನವಾಗಿರುತ್ತಿದ್ದ.
ಆದರೆ ಒಂದೆರಡು ಸಲ ಮಾತ್ರ, ಆಮೇಲೆ ಅದೂ ನಿಂತು ಹೋಯಿತು. ನಾನೇನಾದರೂ ಬುದ್ಧಿ ಹೇಳಲು ಹೋದರೆ,
" ನೀನು ಬಿಡು ಬದುಕಕ್ಕೆ ಗೊತ್ತಿಲ್ದೆ ಇರೋನು, ಈಗಿನ ಕಾಲ್ದಲ್ಲಿ ಮೋಸ, ನಾಟಕ ಇವುಗಳು ಇದ್ರೇನೆ ಬದ್ಕಕ್ಕಾಗೋದು."
"ಅಲ್ವೋ ನಿಜವಾಗ್ಲೂ ಎಷ್ಟೊಂದು ಬುದ್ಧಿವಂತಿಕೆ ಇದೆ ನಿಂಗೆ. ಆ ಬುದ್ಧಿವಂತಿಕೇನ ಒಳ್ಳೇ ರೀತಿನಲ್ಲಿ ಬಳಸ್ಕೊಂಡ್ರೆ ನಮ್ಮೆಲ್ಲರಿಗಿಂತ ಚೆನ್ನಾಗಿರಬಹುದು ನೀನು."
"ಈಗೇನಾಗಿದ್ದೀನಿ, ನಿಮ್ಮೆಲ್ಲರಿಗಿಂತ ಚೆನ್ನಾಗೇ ಇದ್ದೀನಿ, ಬುದ್ಧಿವಂತಿಕೇನೂ ಚೆನ್ನಾಗೆ ಬಳಸ್ಕೊಳ್ತಾನೂ ಇದ್ದೀನಿ."
"ಈ ತರ ಎಲ್ರುಗೂ ಮೋಸ ಮಾಡಿ ಏನು ಉದ್ದಾರ ಆಗ್ತೀಯ ನೀನು, ಒಳ್ಳೆ ಕೆಲ್ಸ ಇದೆ, ಒಳ್ಳೆ ಸಂಪಾದ್ನೆ ಇದೆ. ಬೇಡ ಅಂದ್ರೆ ನಿಮ್ಮದೇ ಫ್ಯಾಕ್ಟರಿ ಇದೆ ಆಲ್ವಾ, ಅಲ್ಲೇ ಹೋಗಿ ನೋಡ್ಕೋ".
"ಅಲ್ಲಿ ಹೋದ್ರೆ ಏನೂ ಸಿಗಲ್ಲ, ನಮ್ಮಪ್ಪ ಕೊಡೋ ಚೂರೋಪಾರೋ ಪುಡಿಗಾಸ್ಗೆ, ಅವನು ಹೇಳ್ದಂಗೆ ಕೇಳ್ಕೊಂಡು ಬಿದ್ದಿರ್ಬೇಕು. ಇಲ್ಲಾದ್ರೆ ಬರೋ ಸಂಬಳದ ಜೊತೆಗೆ, ಮೇಲ್ಸಂಪಾದ್ನೇನೂ ಚೆನ್ನಾಗೆ ಆಗುತ್ತೆ. ಹೇಗ್ ಮಜಾ ಮಾಡ್ಬಹುದು ಅಂತೀಯಾ?", ಮಾತು ನಿಲ್ಲಿಸಿದ ಸತ್ಯ. ಮತ್ತೆ ಮೆತ್ತಗೆ ಹತ್ತಿರ ಬಂದು ಮೆಲುಧ್ವನಿಯಲ್ಲಿ, "ನಿಂಗೆ ಒಂದು ವಿಷ್ಯ ಹೇಳ್ತೀನಿ, ಯಾರ್ಗೂ ಈಗ್ಲೆ ಹೇಳಕ್ಕೆ ಹೋಗ್ಬೇಡ. ಮದ್ವೆ ಮಾಡ್ಕೊಳ್ಳೋಕ್ಕೆ ಒಂದು ಹುಡ್ಗಿ ನೋಡ್ಕೊಂಡಿದ್ದೀನಿ, ಸೌಮ್ಯ ಅಂತ ಹೆಸ್ರು. ಬ್ಯಾಂಕ್ನಲ್ಲಿ ಕೆಲಸ ಮಾಡ್ತಾಳೆ. ಮಾತುಕತೇನೂ ಆಗಿದೆ. ಲಗ್ನಪತ್ರಿಕೆ ಆಗೋದೊಂದ್ ಬಾಕಿ ಅಷ್ಟೆ. ನಿನ್ನೊಬ್ಬನನ್ನು ಕರೀತಿನಿ, ಬರಬೇಕು ನೀನು".
ನನಗಂತೂ ಇದು ವಿದ್ಯುಧಾಘಾತದಂತೆ ಇತ್ತು.
"ನೀನು ಮದ್ವೆ ಮಾಡ್ಕೋತಿದ್ದೀಯಾ? ನಿಮ್ಮ ಅಪ್ಪ ಅಮ್ಮ ನಿಂಗೆ ಈಗಲೇ ಹೆಣ್ಣು ಹುಡುಕಿ ಮದ್ವೆ ಮಾಡ್ತಿದ್ದಾರಾ.?"
"ಅವರಿಗೆ ಇನ್ನೂ ಹೇಳಿಲ್ಲ. ನಾನೇ ಹುಡುಕಿಕೊಂಡಿದ್ದೀನಿ. ಮದ್ವೆಗೆ ಮುಂಚೆ ಹೇಳ್ತೀನಿ. ಇಲ್ಲಾಂದ್ರೆ ಅವರೆ ನನ್ನ ಮದ್ವೆಗೆ ಕಲ್ಲು ಹಾಕಿ ಬಿಡ್ತಾರೆ".

ಮುಂದಿನ ಪುಟ ನೋಡಿ ...

"ಅಲ್ಲೋ, ಆ ಹುಡುಗಿಗೆ ಅಪ್ಪ ಅಮ್ಮ ಇಲ್ವಾ, ನಿಮ್ಮ ಮನೆಯವರನ್ನೆ ನೋಡ್ದೀರ ಅದು ಹೇಗೆ ನಿನಗೆ ಹೆಣ್ಣು ಕೊಡೋದಿಕ್ಕೆ ಒಪ್ಕೊಂಡಿದ್ದಾರೆ? ಮಾತು ಕತೆಗೆ ದೊಡ್ಡೋರು ಇರೋದು ಬೇಡವಂತ. ಬೇಡ ಕಾಣೋ, ಒಂದು ಹುಡುಗಿಗೆ ಮೋಸ ಮಾಡಿ, ಬಾಳು ಹಾಳ್ಮಾಡ್ಬೇಡ".

"ಯಾಕೆ, ನಂಗೆ ಹುಡುಗಿ ಕೊಡಲ್ಲಾ ಅನ್ನಕ್ಕೆ ಏನಾಗಿದೆ. ನೋಡಕ್ಕೆ ಚೆನ್ನಾಗಿಲ್ವಾ, ಕೆಲ್ಸ ಇಲ್ವಾ. ಯಾವೋನಾದ್ರು ಏನಾದ್ರು ಮಾತಾಡಿದ್ರೆ ನರಸಿಂಹನ ತರ ಎದೆ ಬಗೆದು ಬಿಡ್ತೀನಿ ಅಷ್ಟೆ".

ಮತ್ತೆ ಇದ್ದಕ್ಕಿದ್ದ ಹಾಗೆ ವರ ಕೊಡುವ ದೇವರ ಪ್ರತಿಮೆಯಂತೆ ನಿಂತು, " ಭಕ್ತ, ನೀನು ನನ್ನ ಪ್ರಾಣ ಸ್ನೇಹಿತ, ಅದಕ್ಕಾಗಿ ನಾನು ನಿನಗೆ ವರವೊಂದನ್ನು ದಯಪಾಲಿಸುತ್ತೇನೆ. ನನ್ನಿಂದ ನಿನಗೆ ಎಂದಿಗೂ ತೊಂದರೆಯಾಗದು, ಮೋಸವೂ ಆಗದು, ನೀನು ಸಹಾಯಕ್ಕಾಗಿ ಕರೆದರೆ ನಾನೆಲ್ಲಿದ್ದರೂ ಓಡಿಬರುವೆ", ಎಂದು ಗಂಭೀರ ಧನಿಯಲ್ಲಿ ನುಡಿದು ನನ್ನ ತಲೆಯ ಮೇಲೆ ಹರಸುವಂತೆ ಅವನ ಕೈಗಳನ್ನಿಟ್ಟು, ಜೋರಾಗಿ ನಗುತ್ತಾ ದಾಪುಗಾಲು ಹಾಕುತ್ತಾ ಅಲ್ಲಿಂದ ಹೊರಟುಹೋಗಿದ್ದ.

ಸತ್ಯನ ಆಲೋಚನೆಯಲ್ಲಿ ತಲ್ಲೀನನಾಗಿ ನಡೆದಿದ್ದ ನನಗೆ, ಮದುವೆ ಮನೆಯ ಕಲರವದಿಂದ, ಛತ್ರದ ಹತ್ತಿರ ಬಂದಿದ್ದೇನೆಂಬ ಅರಿವಾಯಿತು. ಅಮ್ಮ ಊಟ ಮುಗಿಸಿ ಕುಳಿತಿದ್ದರು. ನನ್ನದೂ ಊಟವಾದ ಕೂಡಲೇ ಹೊರಟೆವು. ತುಮಕೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಹೋಗಿ ಹಲವಾರು ವರ್ಷಗಳೇ ಆಗಿದ್ದ ವು. ಆಟೋದಲ್ಲಿ ಸ್ಟೇಷನ್ ಗೆ ಹೋಗಿ, ಬೆಂಗಳೂರು ಪ್ಯಾಸೆಂಜರ್ ಗಾಡಿ ಹಿಡಿದೆವು.

ಅಮ್ಮ,"ಸಿಕ್ಕಿದ್ದನೇನು ಸತ್ಯ, ಅವರ ಅಪ್ಪ ಅಮ್ಮ ಇದ್ದರೇನು? ಮಾತನಾಡಿಸಿಕೊಂಡು ಬಂದ್ಯಾ?" ಎಂದು ಕೇಳಿದ್ರು.

"ಅವನು ಇರಲಿಲ್ಲ, ಅವನ ಅಪ್ಪ ಅಮ್ಮನ್ನ ಮಾತ್ನಾಡಿಸಿಕೊಂಡು ಬಂದೆ, ಅವನು ಎಲ್ಲಿದ್ದಾನೆ ಅಂತ ಅವರಿಗೂ ಗೊತ್ತಿಲ್ಲ...," ಎನ್ನುತ್ತಾ ನಡೆದ ವಿಷಯವನ್ನು ಚುಟುಕಾಗಿ ಹೇಳಿದೆ.

"ಪಾಪ, ಮೊದಲಿಗೆ ಎಷ್ಟು ಒಳ್ಳೆ ಹುಡುಗ ಆಗಿದ್ದ, ಏನಾಯ್ತೋ?", ಎನ್ನುತ್ತಲೇ ಅಮ್ಮ ನಿದ್ದೆಯ ಮಂಪರಿಗೆ ಜಾರಿದರು.

"ಹೌದು ಎಷ್ಟು ಒಳ್ಳೆಯ ಹುಡುಗನಾಗಿದ್ದ," ರೈಲು ಮುಂದೆ ಸಾಗಿದಂತೆ, ನನ್ನ ನೆನಪುಗಳು ಮತ್ತೆ ಸತ್ಯನ ಹಿಂದೆ ಓಡಿತ್ತು.



ಸಿಹಿ ಸಿಹಿ ನೆನಪು !!!

ಸ್ಮಿತಾ ಮೇಲ್ಕೋಟೆ

ಈಗೀಗ Instragram ಮತ್ತು ಫೇಸ್ಬುಕ್ ನಲ್ಲಿ ಗಳಿಗೆಗೆ ಒಂದು, ಹೊಸಹೊಸದಾಗಿ ಫೋಟೋಶಾಪ್ ಮಾಡಿ ಏರಿಸುವ ಛಾಯ ಚಿತ್ರಗಳನ್ನು ನೋಡುತ್ತಾ ನನ್ನ ಬಾಲ್ಯದಲ್ಲಿ ಫೋಟೋ ತೆಗೆಸಿಕೊಳ್ಳುವ ಸಂಭ್ರಮ ನೆನಪಿಗೆ ಬಂತು. ಅದರ ಬಗ್ಗೆಯೇ ಒಂದು ಚಿಕ್ಕ ಪ್ರಬಂಧ ಬರೆಯುವ ಮನಸ್ಸಾಯಿತು ...

ಶಾಲೆಗಳಲ್ಲಿ ವರ್ಷಕ್ಕೊಂದೇ ದಿನ ಫೋಟೋ ದಿನ. ಅವತ್ತು ಕೊಂಚ ಹೆಚ್ಚಾಗಿಯೇ ಪೌಡರ್ ಮತ್ತು ಸ್ನೋ. ಅದು ಫೋಟೋಗ್ರಾಫರ್ ಬರುವ ತನಕ ಕಾಯದೆ, ಏಪ್ರಿಲ್ ಮೇ ಬಿಸಿಲಿಗೆ ಕರಗಿ ನೀರಾದರೂ ಕೂಡ, ನಮ್ಮಗಳ ಉತ್ಸಾಹ ಮಾತ್ರ ದುಪ್ಪಟ್ಟಾಗುತ್ತಿತ್ತು.

ಫೋಟೋಗ್ರಾಫರ್ ನನ್ನು ನಾವುಗಳು ನೋಡುತ್ತಿದ್ದ ರೀತಿ, ಅವನು ಯಾವ ನಟನಿಗೂ ಕಡಿಮೆ ಎಂಬ ಭಾವ ಬರುತ್ತಿರಲಿಲ್ಲ. ಅವನು ಹೇಳುತಿದ್ದ "ಸ್ಮೈಲ್" ಎಂಬ ಪದ ನನಗೇ ಹೇಳುತ್ತಿದ್ದಾನೆ ಎಂದು ಇರುವ ೩೨ ಹಲ್ಲುಗಳ ಪ್ರದಶನ ಮಾಡುತ್ತಿದ್ದೆ. ನಮ್ಮ ಫೋಟೋ ತೆಗೆದರೂ ಅದು ಹೇಗೆ ಬಂದಿದೆ ಎಂದು ಒಂದು ತಿಂಗಳು ಕಾಯಬೇಕಿತ್ತು. ಶಾಲೆ ಮತ್ತೆ ತೆರೆದ ಮೇಲೆ ಹೆಡ್ ಮಾಸ್ಟರ್ ರೂಮಿನಲ್ಲಿ ಒಂದೊಂದು ತರಗತಿಯ ಚಿತ್ರ ನೇತು ಹಾಕುತಿದ್ದರು. ನಮ್ಮೆಲ್ಲರ ಮಖಗಳು ಕಾಸಿನಗಲ. ಅದನ್ನು ನೋಡೇ ಸಂತೋಷ ಇಮ್ಮಡಿ.

ನಿಮಿಷಕ್ಕೊಂದು ಚಿತ್ರ, ಅದಕ್ಕೊಂದು ಎಡಿಟಿಂಗ್ ಸಾಫ್ಟ್ವೇರ್. ಕಲರ್ ಜಾಸ್ತಿ, ಬೆಳಕು ಕಮ್ಮಿ ಜಾಸ್ತಿ ಮಾಡಿ ನಾವು ನಾವೇನಾ ಎಂಬ ಕುತೂಹಲ, ಚಿತ್ರ ನಟ ಮತ್ತು ನಟಿಯರಿಗೇನು ಕಡಿಮೆ ಎಂಬ ಭಾವದಲ್ಲಿ ರಾಜಾರೋಷವಾಗಿ ಸೋಶಿಯಲ್ ಮೀಡಿಯಾನಲ್ಲಿ ಏರಿಸಿ, ವಿಚಿತ್ರ ಸಂತೋಷ ಅನುಭವಿಸುವುದು ಈ ಕಾಲದ ಕ್ಷಣಿಕ ಸುಖ.

ಒಂದು ಬಾರಿ ಕುಟುಂಬದ ಗೆಳೆಯರೊಂದಿಗೆ ಉತ್ತರ ಭಾರತ ಪ್ರವಾಸದ ಸಮಯ. ದೋಣಿಯಲ್ಲಿ ಕುಳಿತಾಗ, ತಾಜಮಹಲ್ ಬಳಿ ಕುಳಿತಾಗ ಇತ್ಯಾದಿ ... ನಮ್ಮ ಫೋಟೋಗಳನ್ನೂ ತಂದೆಯವರ ಗೆಳೆಯರು ಕ್ಲಿಕ್ಕಿಸಿದರು. ನಮಗೂ ಉತ್ಸಾಹ ಮತ್ತು ಅವರಿಗೂ ಸಂತೋಷ, ನಮ್ಮ ನಗು ಮುಖ ನೋಡಲು. ಆಗ ಎಲ್ಲರ ಮನೆಯಲ್ಲೂ ಕಾಮೆರಾ ಇರುತಿದ್ದದ್ದು ಕಡಿಮೆ. ಇದ್ದರೂ, ದಿನ ನಿತ್ಯ ಫೋಟೋ ತೆಗೆಯುತ್ತಲೇ ಇರಲಿಲ್ಲ. ಮದುವೆ ಮುಂಜಿ ಗೃಹಪ್ರವೇಶವೇ ಬರಬೇಕು ನಮಗೆ ಕ್ಯಾಮೆರಾ ಭಾಗ್ಯ ಸಿಗಲು.

ಅಪ್ಪನ ಗೆಳೆಯರು ಫೋಟೋ ರೀಲ್ ಹಾಕಿದ ಕ್ಯಾಮೆರಾವನ್ನು ಊರಿಗೆ ಬಂದ ಮೇಲೆ, ವಾಶ್ ಮಾಡಿಸುವುದಕ್ಕೆ ಕೊಟ್ಟರು. ನಮಗೆ ಕಾತುರ ಯಾವಾಗ ಫೋಟೋ ಬರತ್ತೆ ಅಂತ. ಮೊದಲ ಬಾರಿ ಒಂದಕ್ಕಿಂತ ಹೆಚ್ಚು ಫೋಟೋಗಳಿಗೆ ಪೋಸ್ ಮಾಡಿದ್ದು. ಅಪ್ಪನ ಗೆಳೆಯರು ಬಂದರು, ಅವರ ಕೈ ಯಾಕೋ ಖಾಲಿ, ಮುಖ ಸಪ್ಪಗಿತ್ತು, ಅದನ್ನು ತೋರಿಸಿಕೊಳ್ಳದೆ ದೇಶಾವರಿ ನಗೆ ಬೀರುತ್ತಾ. ಕ್ಯಾಮೆರಾ ಫಿಲಂ ರೀಲ್ ಲೋಡ್ ಮಾಡುವಾಗ ಸರಿಯಾಗಿ ಮಾಡದೆ ಎಲ್ಲಾ ಫೋಟೋಗಳೂ ಮಬ್ಬಾಗಿ ಬಂದಿತ್ತು. ಅವರು ಹೇಳಿದ ಸುದ್ದಿ ಕೇಳೇ ನಾವು ಅವರ ಮುಂದೆ ಕಣ್ಣೀರು ಹಾಕುವುದೊಂದು ಬಾಕಿ.

ಇನ್ನೊಂದು ಬಾರಿ ನನ್ನ ಅಪ್ಪನ ಅಣ್ಣ ಅಮೆರಿಕೆಯಿಂದ ಪೋಲೋರಾಯ್ಡ್ ಕ್ಯಾಮೆರಾ ತಂದು ನಮ್ಮೆಲ್ಲಾ ಭಾವ ಚಿತ್ರ ಒಂದೊಂದು ಕ್ಲಿಕ್ಕಿಸಿ, ತಕ್ಷಣವೇ ಕೊಟ್ಟು ನಮ್ಮನ್ನೆಲ್ಲಾ ಬೆರಗು ಗೊಳಿಸಿದರು. ಹೀಗೂ ಉಂಟೆ! ಸ್ಮೈಲ್ ನಲ್ಲಿ ನಾವೆಲ್ಲಾ ಕಣ್ಣರಳಿಸಿ ನಮ್ಮಗಳ ಫೋಟೋ ಪದೇ ಪದೇ ನೋಡಿದ್ದೇ ನೋಡಿದ್ದು.

ಕಾಲೇಜಿಗೆ ಬಂದ ಹೊಸತು, ಗೆಳತಿಯರೆಲ್ಲಾ ಕೂಡಿ ದುಡ್ಡು ಹಾಕಿದೆವು, ವಿಕಾಸ್ ಸ್ಟುಡಿಯೋ ಮಲ್ಲೇಶ್ವರದಲ್ಲಿ ಪ್ರಸಿದ್ಧಿಯಾದ ಒಂದೇ ಸ್ಟುಡಿಯೋ. ಅಲ್ಲಿಗೆ ಹೋಗುವ ಸಂಭ್ರಮ, ಹೋಗುವ ದಾರಿಯಲ್ಲಿ ತಿಂದ ಮಸಾಲಾ ದೋಸೆ ಮತ್ತು ಬಿಸಿ ಬಿಸಿ ಕಾಫಿ ಮರೆಯಕ್ಕಾಗಲ್ಲ. ಫೋಟೋ ಸ್ಟುಡಿಯೋ ಒಳಗೆ ಇಟ್ಟಿದ್ದ ಪೌಡರ್, ಅದನ್ನೇ ಸ್ವಲ್ಪ ಬಳಸಿ ಇನ್ನೂ ಸುಂದರವಾಗಿ ಕಾಣುವ ಪ್ರಯತ್ನ.

ನನ್ನ ಫೋಟೋ ಆಸೆಗೆ ಪೂರಕವಾಗಿ ಯಾರೋ ಕ್ಯಾಮೆರಾ ನಮ್ಮಪ್ಪನಿಗೆ ಉಡುಗೊರೆ ಕೊಟ್ಟು ಬಿಟ್ಟರು. ನಮಗೋ ಲಾಟರಿಯಲ್ಲಿ ಲಕ್ಷ ಹೊಡೆದ ಸಂತೋಷ . ನಮ್ಮ ಫೋಟೋ ನಾವೇ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳಬಹುದು. ಹೊಸ ಬಟ್ಟೆ, ಆಕರ್ಷಕ ಜಡೆ ಹಾಕಿ, ಮನೆಯಲ್ಲೇ ಬಿಟ್ಟಿದ್ದ ಹೂವು ಕಟ್ಟಿ ಮುಡಿದು, ಮನೆ ಹೊರಗೆ, ಒಳಗೆ, ಬೆಳಿಗ್ಗೆ, ಸಂಜೆ ಎಲ್ಲಾ ವೇಳೆಯಲ್ಲೂ ಪೋಸ್ ಕೊಟ್ಟು, ಹಾಸ್ಯ ಪ್ರವೃತ್ತಿಯುಳ್ಳ ನಮ್ಮ ಅಪ್ಪ ಹಾಗೆ ಕೂರು, ಹೀಗೆ ಕೂರು ಎಂದು ಡೈರೆಕ್ಷನ್ ಕೂಡ ಮಾಡಿ, ಮುಗುಳ್ನಗೆ, ಭಾರಿ ನಗೆ, ಮಂದಹಾಸ ಎಲ್ಲಾ ರೀತಿಯಲ್ಲೂ ನಕ್ಕು, ಒಂದೊಂದು ಬಾರಿ ಕ್ಲಿಕ್ಕಿಸಿದ ಸದ್ದಿಗೆ ರೋಮಾಂಚನ ಗೊಳ್ಳುತ್ತಾ, ನಾವುಗಳು ಫೋಟೋ ನಲ್ಲಿ ಸುಂದರವಾಗಿ ಕಾಣುವ ಕನಸು ಕಾಣುತ್ತಾ, ಅಪ್ಪನ ದುಂಬಾಲು ಬಿದ್ದೆವು. ಯಾವಾಗ ರೀಲ್ ತೆಗೆದು ನಮ್ಮಗಳ ಫೋಟೋ ತೋರಿಸುತ್ತೀಯಾ ಅಂತ.

ಊಟ ತಿಂಡಿ ಎಲ್ಲಾ ಮುಗಿದು, ಅಪ್ಪ ಸಮಾಧಾನದ ದನಿಯಲ್ಲಿ ಇವತ್ತು ನಾನು ರೀಲ್ ಹಾಕದೇ ಕ್ಯಾಮೆರಾ ಉಪಯೋಗಿಸುವ ಬಗೆ ರಿಹರ್ಸಲ್ ಮಾಡಿದೆ. ನಾಳೆ ರೀಲ್ ತಂದು ನಿಜವಾಗಿ ಫೋಟೋ ತೆಗೀತೀನಿ ಅಂದಾಗ, ದೊಡ್ಡ ಆಟಂ ಬಾಂಬ್ ಒಂದು ಪುಸ್ ಆದ ಅನುಭವ.

ನಂತರ ದಿನಗಳಲ್ಲಿ ನಮ್ಮ ಕೈಯಲ್ಲೇ ಸ್ಮಾರ್ಟ್ ಫೋನು, ಬೇರೆಯವರ ಹಂಗೇನು ಎಂಬ ಭಾವದಲ್ಲಿ ಸೆಲ್ಫಿ ಕ್ಲಿಕ್ಕಿಸಿ ಕ್ಲಿಕ್ಕಿಸಿ, ತೆಗೆದ ಚಿತ್ರ ಸರಿ ಬರದಿದ್ದರೆ, ಮುಖ ಮುಲಾಜಿಲ್ಲದೆ ಡಿಲೀಟ್ ಮಾಡಿಕೊಂಡು, ಸೋಶಿಯಲ್ ಮೀಡಿಯಾ ನಲ್ಲಿ ಹಾಕುವಾಗ ಸಾವಿರ ಬಾರಿ ಎಡಿಟ್ ಮಾಡಿಕೊಂಡು, ನೂರೆಂಟು ಲೈಕ್ ಬಂದರೂ ಸಮಾಧಾನ ಇರದ ಕಾಲಕ್ಕೆ ಬಂದು ತಲುಪಿದ್ದೇವೆ. ತೆಗೆದ ಒಂದು ಫೋಟೋ ಕೂಡ ಆಲ್ಬಮ್ ಹೋಗದೆ ಫೋನ್ ಅಥವಾ ಕ್ಲೌಡ್ ನಲ್ಲಿ ಸೇರಿ ಸಾವಿರದ ಜೊತೆ ಒಂದಾಗಿ ಲೀನವಾಗಿ ಹೋಗುತ್ತೆ. ▪

ನೀವು ಮಾಡಿ

ತೇಲುವ ಮೊಟ್ಟೆ

ಸಂಕಲನ: ಬದರಿ ತ್ಯಾಮಗೊಂಡ್ಲು

ಇಸ್ರೇಲ್ ಬಳಿ ಇರುವ ಮೃತ ಸಮುದ್ರದ (Dead Sea) ಬಗ್ಗೆ ಕೇಳಿದ್ದೀರಲ್ಲವೇ? ಈ ಸರೋವರದಲ್ಲಿ ನೀವು ಈಜದೆ ತೇಲಬಲ್ಲಿರಿ! ಆಶ್ಚರ್ಯವೇ. ಇದರ ರಹಸ್ಯ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.

ಬೇಕಾಗುವ ಸಾಮಾನು:

ಎರಡು ಗಾಜಿನ ಲೋಟಗಳು, ಎರಡು ಮೊಟ್ಟೆಗಳು, ಐದಾರು ಚಮಚ ಅಡುಗೆ ಉಪ್ಪು,

ವಿಧಾನ

ಎರಡು ಲೋಟಕ್ಕೂ ಕುಡಿಯುವ ನೀರನ್ನು ತುಂಬಿ. ಒಂದು ಲೋಟಕ್ಕೆ ಐದಾರು ಚಮಚ ಉಪ್ಪನ್ನು ಹಾಕಿ ಕದಡಿ. ಇರುವ ಎರಡು ಮೊಟ್ಟೆಯನ್ನು ನಿಧಾನವಾಗಿ ಒಂದೊದ್ದು ಲೋಟಕ್ಕೆ ಹಾಕಿ ಏನಾಗುವುದೆಂದು ಗಮನಿಸಿ.

ಶುದ್ಧ ನೀರಿರಿರುವ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರುವುದು. ಉಪ್ಪಿನ ನೀರಿನ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರದೆ ತೇಲುವುದು

ರಹಸ್ಯ

ಯಾವುದೇ ವಸ್ತು ಮುಳುಗಬೇಕಾದರೆ ಅದರ ಸಾಂದ್ರತೆ (Density) ಹೆಚ್ಚಿರಬೇಕು. ಮೊಟ್ಟೆಯ ಸಾಂದ್ರತೆ ಶುದ ನೀರಿನ ಸಾಂದ್ರತೆಗಿಂತ ಜಾಸ್ತಿ. ಹೀಗಾಗಿ ಮುಳುಗತ್ತದೆ. ಆದರೆ, ನೀರಿಗೆ ಉಪ್ಪು ಬೆರೆಸುತ್ತಾ ಹೋದಂತೆ, ನೀರಿನ ಸಾಂದ್ರತೆ ಮೊಟ್ಟೆಯ ಸಾಂದ್ರತೆಗಿಂತ ಹೆಚ್ಚಾಗುತ್ತಾ ಹೋಗುತ್ತದೆ. ಈ ಕಾರಣದಿಂದ ಉಪ್ಪು ನೀರಿನಲ್ಲಿ ಹಾಕಿದ ಮೊಟ್ಟೆ ತೇಲುತ್ತದೆ.

ಜಾಣ ಕರ್ನಾಟಕ – ಉತ್ತರ

೧. ಕರ್ನಾಟಕದ ಏಕೈಕ ಬಿಸಿ ನೀರಿನ ಹೊಂಡದ ಹೆಸರು ಬೆಂದ್ರ ತೀರ್ಥ.ಇದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿದೆ .

೨. ತಲಪರಿಗೆ ಎನ್ನುವುದು ಪ್ರಾಕೃತಿಕ ನೀರಿನ ಚಿಲುಮೆಗಳು ಅಥವಾ ಒರತೆಗಳು ಇರುವಲ್ಲಿ ನಿರ್ಮಿಸುತ್ತಿದ್ದ ಹೊಂಡಗಳು ಅಥವಾ ಕಾಲುವೆಗಳು. ಇವುಗಳು ಬೇಸಿಗೆ ಸಮಯದಲ್ಲಿ ಕೆರೆ, ಹಳ್ಳಗಳು ಬತ್ತಿದಾಗ ವ್ಯವಸಾಯಕ್ಕೆ ಮತ್ತು ಜಾನುವಾರುಗಳಿಗೆ ನೀರನ್ನು ಒದಗಿಸುತ್ತಿದ್ದವು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕವಿ ಪು. ತಿ. ನ ನೆನಪು

ಶ್ರೀಮತಿ ಟಿ. ಎಸ್. ಸತ್ಯವತಿ ಅವರ ಹಾಡುಗಾರಿಕೆ

7TH OCT 2017, 6 PM

Wattle Grove Public School, Cressbrook Drive, NSW 2173

ಹೆಚ್ಚಿನ ಮಾಹಿತಿಗಾಗಿ: sugamakannada@gmail.com

ನಾರಾಯಣ - 0423 634 979

ಲಕ್ಷ್ಮೀ ಜಗನ್ನಾಥ್ - 0408 232 754

ಅಶ್ವಿನ್ - 0421 221 353

ದೀಪಾವಳಿ ಹಬ್ಬ

ದಿನಾಂಕ ೧೪/೧೫ ಅಕ್ಟೋಬರ್ ೨೦೧೭

ಪಾರಮಟ್ಟ ಪಾರ್ಕ್

ಹೆಚ್ಚಿನ ಮಾಹಿತಿಗಾಗಿ

http://hinducouncil.com.au/

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.